# ವಿವೇಕಾಂಜಲಿ

## ಸಾಧನೆಯ ದಿನಗಳ ಸವಿ ನೆನಪು...

## 2023-24



### ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

## ರಾಷ್ಟ್ರಗೀತೆ



ಜನಗಣಮನ-ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ !
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವ ಶುಭ ನಾಮೇ ಜಾಗೇ,
ತವ ಶುಭ ಆಶಿಷ ಮಾಗೇ,
ಗಾಹೇ ತವ ಜಯಗಾಥಾ.
ಜನಗಣಮಂಗಳದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ!
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ.

**- ರವೀಂದ್ರನಾಥ ಠಾಗೂರ್**

## ನಾಡ ಗೀತೆ

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ.
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ.
ರಾಘವ ಮಧುಸೂಧನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ.
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ.
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ.
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ.
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ.

**- ರಾಷ್ಟ್ರಕವಿ ಕುವೆಂಪು**

# ವಿವೇಕಾಂಜಲಿ

... ಸಾಧನೆಯ ದಿನಗಳ ಸವಿನೆನಪು

**ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)**

**ಶಿವಮೊಗ್ಗ ರಸ್ತೆ, ಶಿಕಾರಿಪುರ**

**ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.), ಶಿಕಾರಿಪುರ**
ಇದರ ಅಂಗ ಸಂಸ್ಥೆಗಳ ಸಾಧನೆಯ ದಿನಗಳ
ಸವಿನೆನಪಿನ ಅಕ್ಷರ ಕುಸುಮ
"**ವಿವೇಕಾಂಜಲಿ**" ಸ್ಮರಣ ಸಂಚಿಕೆ

**2023–24**

ಹಕ್ಕುಗಳು :
**ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)**
ಶಿಕಾರಿಪುರ

ಪ್ರಕಾಶಕರು :
**ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)**
ಶಿವಮೊಗ್ಗ ರಸ್ತೆ, ಶಿಕಾರಿಪುರ
ದೂರವಾಣಿ : 08187 – 222383
web : www.svvsedu.in
e-mail : svvsshikaripura@gmail.com

ಮುದ್ರಣ :
**ರಾಯಲ್ ಪ್ರಿಂಟರ್ಸ್**
ವಂದನಾ ಟಾಕೀಸ್ ಎದುರು, ಕೆ.ಆರ್.ಪುರಂ ರಸ್ತೆ,
ಶಿವಮೊಗ್ಗ
ಮೊ : 98862 73495



# ಶುಭ ಸಂದೇಶ



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

## ಶ್ರೀ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು


ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮಠ, ಆನಂದಪುರಂ - 577 412
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಫೋನ್: 08183-262434

ಶ್ರೀ ಬೆಕ್ಕಿನಕಲ್ಮಠ, ಎಸ್.ಜೆ.ಎಂ. ವೃತ್ತ, ಶಿವಮೊಗ್ಗ, - 577 202, ಫೋನ್ : 08182 - 224114


ಕ್ರಮಾಂಕ:

ದಿನಾಂಕ: 06-01-2024

### ಶುಭ ಸಂದೇಶ

ಮಲೆನಾಡಿನ ಪ್ರತಿಷ್ಠಿತ ಸಂಸ್ಥೆ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ. ಇಪ್ಪತ್ತೈದು ಸಂವತ್ಸರಗಳ ಸಾರ್ಥಕ ಸೇವೆ ಸಲ್ಲಿಸಿ ಮುನ್ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಈ ನಾಡಿನ ಶಿಕ್ಷಣ, ಕ್ರೀಡೆ ಸಾಂಸ್ಕೃತಿಕ ಕ್ಷೇತ್ರದ ಪ್ರಗತಿಗೆ ಕಾರಣವಾಗಿದೆ. ಸನಾತನ ಸಂಸ್ಕೃತಿಯ ತಳಹದಿಯಮೇಲೆ ಆಧುನಿಕ ಶಿಕ್ಷಣವನ್ನು ಎಲ್ಲ ಸ್ತರದ ಜನಗಳಿಗೆ ಸುಲಭದಲ್ಲಿ ದೊರೆಯುವಂತೆ ಮಾಡಿರುವುದು ಅನುಕರಣೀಯವಾಗಿದೆ.

ಸಮಗ್ರ ಕಲ್ಯಾಣ ಕರ್ನಾಟಕದ ಕನಸನ್ನು ನನಸು ಮಾಡಿದ ಈ ನಾಡು ಕಂಡ ಅಪರೂಪದ ವ್ಯಕ್ತಿ ಶಕ್ತಿ ನಿಕಟ ಪೂರ್ವ ಮುಖ್ಯಮಂತ್ರಿಗಳಾದ ಸನ್ಮಾನ್ಯಶ್ರೀ ಬಿ ಎಸ್ ಯಡಿಯೂರಪ್ಪನವರು. ಸರ್ಕಾರದ ಕಾರ್ಯಗಳಲ್ಲದೆ ವೈಯ್ಯಕ್ತಿಕ ನೆಲೆಯಲ್ಲಿಯೂ ಶಿಕ್ಷಣ, ಆರೋಗ್ಯ, ಕ್ರೀಡೆ, ಕೌಶಲಾಭಿವೃದ್ಧಿ ಹೀಗೆ ಹತ್ತು ಹಲವು ಸಂಸ್ಥೆಗಳನ್ನು ಸ್ಥಾಪಿಸಿರುವುದು ಅಭಿಮಾನ ಮತ್ತು ಗೌರವದ ಸಂಗತಿ. ಈ ಎಲ್ಲ ಸಂಗತಿಗಳ ಪ್ರತಿರೂಪದಂತಿರುವ ಸನ್ಮಾನ್ಯ ಶ್ರೀ ಬಿ.ವೈ ರಾಘವೇಂದ್ರರವರು ಕ್ಷೇತ್ರದ ಅಭಿವೃದ್ಧಿ ದೇಶಕ್ಕೆ ಮಾದರಿಯಾಗಿ ರೂಪಿಸಿದ್ದು ವೈಯ್ಯಕ್ತಿಕವಾಗಿ ಈ ಎಲ್ಲ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತಿರುವುದು ಯುವ ನಾಯಕತ್ವದ ಮಾದರಿಯಾಗಿದ್ದಾರೆ.

ವಿವೇಕಕ್ಕೆ ಇನ್ನೊಂದು ಹೆಸರು ವಿವೇಕಾನಂದ. ಯುವ ಶಕ್ತಿಗೆ ವಿವೇಕದೊಂದಿಗೆ ಜ್ಞಾನವನ್ನು ಶಿಕ್ಷಣದ ಮೂಲಕ ನೀಡುತ್ತಿರುವ ಈ ಸಂಸ್ಥೆ 'ವಿವೇಕಾಂಜಲಿ' ಎಂಬ ಸ್ಮರಣ ಸಂಚಿಕೆ ಪ್ರಕಟಿಸುತ್ತಿರುವುದು ಸ್ತುತ್ಯಾರ್ಹವಾಗಿದೆ. ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗಿ ಹೊರಹೊಮ್ಮಲಿ, ವಿವೇಕಾಂಜಲಿ ಸ್ಮರಣ ಸಂಚಿಕೆ ಉತ್ತಮ ಆಕರ ಕೃತಿಯಾಗಲೆಂದು ಹಾಗೂ ಸಂಸ್ಥೆಯ ಕಾರ್ಯಕ್ಷೇತ್ರ ಇನ್ನೂ ವಿಸ್ತಾರವಾಗಲೆಂದು ಹಾರೈಸಲಾಗಿದೆ.

# ನಮ್ಮ ಸ್ಫೂರ್ತಿಯ ಸೆಲೆ...



## ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು

ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

# ಶುಭ ಸಂದೇಶ




**ಬಿ.ಎಸ್. ಯಡಿಯೂರಪ್ಪ**
ಮಾಜಿ ಮುಖ್ಯಮಂತ್ರಿ


ಸಂಖ್ಯೆ :
ದಿನಾಂಕ 01-01-2024.

## ಸಂದೇಶ

1996ರಲ್ಲಿ ನಾವು ಆರಂಭಿಸಿದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಶಿಕಾರಿಪುರ ಇಂದು ಹೆಮ್ಮರವಾಗಿ ಬೆಳೆದಿದೆ. ಗ್ರಾಮೀಣ ಭಾಗದಲ್ಲಿ ಉತ್ತಮವಾದ ಮೂಲಭೂತ ಸೌಕರ್ಯಗಳನ್ನು ಹೊಂದಿದ ವಿದ್ಯಾಸಂಸ್ಥೆಗಳನ್ನು ನಡೆಸುವುದು ಕಷ್ಟಸಾಧ್ಯವೆಂಬ ಭಾವನೆಯನ್ನು ಹೋಗಲಾಡಿಸಿದ ಕೀರ್ತಿ ನಮ್ಮ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಗೆ ಸಲ್ಲಬೇಕು.

ಗ್ರಾಮೀಣ ಭಾಗದಲ್ಲಿ ಕೂಡಾ ವಸತಿಯುಕ್ತ ಶಾಲೆ ಕಾಲೇಜುಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲ ಅದರೊಟ್ಟಿಗೆ ಆಧುನಿಕ ಶಿಕ್ಷಣಕ್ಕೆ ಬೇಕಿರುವ ಎಲ್ಲ ಸೌಲಭ್ಯಗಳನ್ನು ಅಂತರಾಷ್ಟ್ರೀಯ ಗುಣಮಟ್ಟದಲ್ಲಿ ನೀಡಲಾಗುತ್ತಿದೆ.

ಸಂಸ್ಥೆಯ ಈ ಬೆಳವಣಿಗೆಗೆ ಕಾರಣರಾದ ಎಲ್ಲ ಸಿಬ್ಬಂದಿ ವರ್ಗಕ್ಕೆ, ಸದಾಕಾಲ ಬೆಂಬಲಕ್ಕೆ ನಿಂತಿರುವ ಆಡಳಿತ ಮಂಡಳಿಗೆ, ವಿಧ್ಯಾರ್ಥಿಗಳಿಗೆ ಹಾಗೂ ಪೋಷಕರುಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)

# ಸಂಪಾದಕೀಯ



"ನಹೀ ಜ್ಞಾನೇನ ಸದೃಶಂ" ಎಂಬ ಧ್ಯೇಯ ವಾಕ್ಯದೊಂದಿಗೆ 1995 ರಿಂದ ಪ್ರಾರಂಭಗೊಂಡು ಮಲೆನಾಡಿನ ಭಾಗದಲ್ಲಿ ತನ್ನದೇ ಆದ ಪ್ರತಿಷ್ಠಿತ ಹಾಗೂ ಇತಿಹಾಸ ಹೊಂದಿರುವ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯು ಕಳೆದ 26 ವರ್ಷಗಳಿಂದ "ವಿವೇಕಾಂಜಲಿ" ವಾರ್ಷಿಕ ಸಂಚಿಕೆಯನ್ನು ಶೈಕ್ಷಣಿಕ ವರ್ಷದ ವಿವೇಕಾನಂದರ ಜಯಂತಿಯಂದು ಪ್ರಕಟಗೊಳಿಸುತ್ತಾ ಬಂದಿದೆ. ಈ ಶೈಕ್ಷಣಿಕ ಸಾಲಿನ ಸಂಚಿಕೆಯು ಹೊಸ ರೂಪ ಹಾಗೂ ವಿನ್ಯಾಸದಲ್ಲಿ ಹೊರ ಬರುತ್ತಿರುವುದು ವಿಶೇಷವಾಗಿದೆ.

ಈ ಸಂಚಿಕೆಯು ಸಂಸ್ಥೆಯ ಎಲ್ಲಾ ಅಂಗ ಸಂಸ್ಥೆಗಳ ವಿದ್ಯಾರ್ಥಿಗಳು ಪ್ರತೀ ತಿಂಗಳು ನಡೆಸುವ ವಿಶೇಷ ಕಾರ್ಯಕ್ರಮಗಳನ್ನು ಆಯ್ಕೆ ಮಾಡಿ ಪ್ರಕಟಿಸಲಾಗುತ್ತದೆ.

ಈ ರೀತಿಯ ಪ್ರಯತ್ನಗಳು ನಮ್ಮ ಸಂಸ್ಕೃತಿ, ಭಾಷೆ, ಆಚಾರ–ವಿಚಾರಗಳನ್ನು ಹಾಗೂ ಆಧುನಿಕ ಜಗತ್ತಿಗೆ ಬೇಕಾದ ಜ್ಞಾನ ಕೌಶಲಗಳನ್ನು ಬೆಳೆಸುವುದರ ಜೊತೆಗೆ ನಮ್ಮ ಭಾವನೆಗಳಿಗೆ ಹೊಸ ಆಯಾಮಗಳನ್ನು ಒದಗಿಸುತ್ತದೆ.

ಇಂದಿನ ಆಧುನಿಕ ಸ್ಪರ್ಧಾತ್ಮಕ ಯುಗದ ಒತ್ತಡದ ನಡುವೆಯು, ವಿದ್ಯಾರ್ಥಿಗಳಲ್ಲಿ ಹುದುಗಿರುವ ಅಪಾರವಾದ ಜ್ಞಾನದ ನಿಧಿಯನ್ನು ಹೊರತರುವ ಪ್ರಯತ್ನ ಶಿಕ್ಷಕರು ಮಾಡಬೇಕಾಗುತ್ತದೆ. ಓದಿನ ಜೊತೆಜೊತೆಗೆ ಕಲೆ, ಸಾಹಿತ್ಯ, ಸಂಗೀತ ಇತ್ಯಾದಿ ಸೃಜನಾತ್ಮಕ ಕ್ರಿಯಾಶೀಲ ಚಟುವಟಿಕೆಗಳು ವಿದ್ಯಾರ್ಥಿಯನ್ನು ಸಜ್ಜನ ವ್ಯಕ್ತಿಯನ್ನಾಗಿ ರೂಪಿಸಲು ಸಾಧ್ಯ. ಈ ಎಲ್ಲಾ ಮೌಲ್ಯಗಳ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿರುವ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಸುಸಜ್ಜಿತ ಕಟ್ಟಡದ ಜೊತೆಗೆ ಸಶಕ್ತ ಅಧ್ಯಾಪಕ ವೃಂದವನ್ನು ಹೊಂದಿರುವುದೊಂದು ವಿಶೇಷ.

ತಮ್ಮ ಸುಪ್ತ ಪ್ರತಿಭೆಯಿಂದರಳಿದ ಸೃಜನಶೀಲ ಬರಹಗಳನ್ನು ವಿವೇಕಾಂಜಲಿಯಲ್ಲಿ ಪ್ರಕಟಿಸಲು ಸಹಕರಿಸಿದ ವಿದ್ಯಾರ್ಥಿಗಳಿಗೂ, ಆಡಳಿತ ಮಂಡಳಿಯವರಿಗೂ, ಅಧ್ಯಾಪಕ ವೃಂದಕ್ಕೂ, ಸಂಸ್ಥೆಯ ಸಿಬ್ಬಂಧಿ ವರ್ಗಕ್ಕೂ ಮತ್ತು ಸಂಪಾದಕ ಮಂಡಳಿಗೆ ಆಭಾರಿಯಾಗಿದ್ದೇನೆ. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ರಾಯಲ್ ಪ್ರಿಟರ್ಸ್‌ನ ಮಾಲೀಕರು ಹಾಗೂ ಸಿಬ್ಬಂಧಿ ವರ್ಗಕ್ಕೂ ನನ್ನ ಕೃತಜ್ಞತೆಗಳು.

**ಡಾ. ಶಿವಕುಮಾರ್ ಜಿ.ಎಸ್.**

ಪ್ರಧಾನ ಸಂಪಾದಕರು

ಪ್ರತಿನಿಧಿಗಳು, ಆಡಳಿತ ಮಂಡಳಿ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)


ಹಾಗೂ ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

# ಸಂಪಾದಕ ಮಂಡಳಿ

ಪೋಷಕರು :

**ಶ್ರೀಮತಿ ತೇಜಸ್ವಿನಿ ರಾಘವೇಂದ್ರ**

ನಿರ್ದೇಶಕರು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ), ಶಿಕಾರಿಪುರ.




ಪ್ರಧಾನ ಸಂಪಾದಕರು :

**ಡಾ. ಶಿವಕುಮಾರ್ ಜಿ.ಎಸ್.**

ಪ್ರತಿನಿಧಿಗಳು, ಆಡಳಿತ ಮಂಡಳಿ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)
ಹಾಗೂ ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಸಂಪಾದಕರು :

**ಶ್ರೀಯುತ ಕುಬೇರಪ್ಪ ಕೆ.,** ಆಡಳಿತ ಸಮನ್ವಯಾಧಿಕಾರಿಗಳು
ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ), ಶಿಕಾರಿಪುರ.

**ಡಾ. ವೀರೇಂದ್ರ ಎಂ.,** ಪ್ರಾಚಾರ್ಯರು,
ಕುಮದ್ವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜು, ಶಿಕಾರಿಪುರ

**ರವೀಂದ್ರ ಕೆ.ಸಿ.,** ಉಪ ಪ್ರಾಚಾರ್ಯರು
ಕುಮದ್ವತಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ

**ಶ್ರೀಮತಿ ಶರ್ವಾಣಿ ಎಸ್.ಐ.,** ಪ್ರಾಚಾರ್ಯರು
ಕುಮದ್ವತಿ ವಸತಿಯುಕ್ತ ಕೇಂದ್ರೀಯ ವಿದ್ಯಾಲಯ, ಶಿಕಾರಿಪುರ

**ಶ್ರೀಯುತ ವಿದ್ಯಾಶಂಕರ್ ಕೆ.ಎಸ್.,** ಪ್ರಾಚಾರ್ಯರು
ಕುಮದ್ವತಿ ಸಿದ್ಧ ಉಡುಪು ತರಬೇತಿ ಹಾಗೂ ಉತ್ಪಾದನಾ ಕೇಂದ್ರ, ಶಿಕಾರಿಪುರ

**ಶ್ರೀಯುತ ವಿಶ್ವನಾಥ್ ಪಿ.**
ಪ್ರಾಂಶುಪಾಲರು, ಮೈತ್ರಿ ಪ್ರಾಥಮಿಕ ಶಾಲೆ ಮತ್ತು ಕುಮದ್ವತಿ ಪ್ರೌಢಶಾಲೆ, ಶಿಕಾರಿಪುರ

**ಶ್ರೀಯುತ ಪ್ರಶಾಂತ್ ಕುಬಸದ**
ಪ್ರಭಾರ ಮುಖ್ಯೋಪಾಧ್ಯಾಯರು, ಮೈತ್ರಿ ಪ್ರಾಥಮಿಕ ಶಾಲೆ, ಶಿಕಾರಿಪುರ

ಸಹ – ಸಂಪಾದಕರು :

**ಡಾ. ರವಿ ಹೆಚ್.**

ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಸಹಕಾರ :

**ಶ್ರೀ ದೇವರಾಜ್ ನಾಯಕ್**

ಸಿ.ಸಿ.ಟಿ., ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಸಹ–ಸಂಪಾದಕ ವಿದ್ಯಾರ್ಥಿ ಮಂಡಳಿ :

**ಕುಮಾರಿ ರಂಜಿತಾ ಎಸ್.** ಪ್ರಥಮ ವರ್ಷ ಪ್ರಶಿಕ್ಷಣಾರ್ಥಿ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
**ಕುಮಾರಿ ನಿಸರ್ಗ ಎಂ.ಟಿ.** ತೃತೀಯ ಬಿ.ಎಸ್ಸಿ., ಕುಮದ್ವತಿ ಪ್ರಥಮ ದರ್ಜೆ ಕಾಲೇಜು
**ಕುಮಾರ ಪವನ್ ಎಂ.ಹೆಚ್.,** ದ್ವಿತೀಯ ಪಿಯುಸಿ (ವಾಣಿಜ್ಯ), ಕುಮದ್ವತಿ ಪಿಯು ಕಾಲೇಜು
**ಕುಮಾರಿ ವಿಸ್ಮಯಿ ಎಂ.ಯು.** 10ನೇ ತರಗತಿ, ಕುಮದ್ವತಿ ರೆಸಿಡೆನ್ಸಿಯಲ್ ಸ್ಕೂಲ್
**ಕುಮಾರಿ ವೀಣಾ ಎಂ.** 10ನೇ ತರಗತಿ, ಕುಮದ್ವತಿ ಪ್ರೌಢಶಾಲೆ

# ಸಂಸ್ಥೆಯ ಮಾರ್ಗದರ್ಶಕರು



**ಶ್ರೀ ಎಂ.ಬಿ. ಶಿವಕುಮಾರ್**
ಅಧ್ಯಕ್ಷರು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.)



**ಶ್ರೀ ಬಿ. ವೈ . ರಾಘವೇಂದ್ರ**
ಕಾರ್ಯದರ್ಶಿಗಳು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.)



**ಶ್ರೀ ಬಿ.ವೈ . ವಿಜಯೇಂದ್ರ**
ಖಜಾಂಚಿಗಳು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.)



**ಶ್ರೀಮತಿ ತೇಜಸ್ವಿನಿ ರಾಘವೇಂದ್ರ**
ನಿರ್ದೇಶಕರು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.)



**ಶ್ರೀಮತಿ ಪ್ರೇಮಾ ವಿಜಯೇಂದ್ರ**
ನಿರ್ದೇಶಕರು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ.)

# Swamy Vivekananda Vidya Samsthe (R.)




Inaugural Speech by B.Y. Raghavendra on Eve of Teachers Day Celebration

Rank Holders Felicitated by the Management






International Yoga Day Programme



Release of Vivekanjali Annual Magazine



Swachchata Hi Seva Programme



Inauguration of Smt. Mythradevi Yeddiyurappa Datti Upanyasa Programme

# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ




2021-22ನೇ ಸಾಲಿನ ಬಿ.ಇಡಿ ಪ್ರಶಿಕ್ಷಣಾರ್ಥಿಗಳೊಂದಿಗೆ ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗ



Fare-well Programme



Student Union Inauguration



Local Affiliation Committee Visit



NAAC Peer Team in Discussion with Management

NAAC Peer Team Handing over the Report to the Principal





Blood Donation Camp

# Memorable Moments...



Plantation Programme at Kalenahalli



Fruits & Vegetable Salad Preparation Competition



Group Dance Competition



Kannada Rajyotsava Programme



Drama and Art in Education Orientation Programme



Orientation Programme on eve of World Suicide Prevention Day



Street Play on
Eve of Anti-Tobacco Day at
Kalenahalli



69th Wild Life
Conservation Programme



Workshop on Mental Health
Management Techniques for
Teachers




Child Labor Day Celebration in Internship Schools



Oath Taking on World Democracy Day



Students Involved in Pearl Garland Making



Inauguration of NSS Camp
by Sri B.Y. Vijayendra
Member of Legislative Assembly
Shikaripura Constituency



Student Teachers
Involved in NSS Camp
Cultural Fest



Shramadhana by
Student Teacher in
Citizenship Training Camp



Inauguration of International Conference by Sri B.Y. Raghavendra Member of Parliament Shimoga Constituency

Releasing Souvenir of International Conference





Inaugural Speech by Sri B.Y. Raghavendra Member of Parliament Shimoga Constituency & Secretary SVVS

# MY JOURNEY IN KUMADVATHI COLLEGE OF EDUCATION

I was very excited to write my experience and my journey in Kumadvathi college of education. I was inclined to the idea of becoming a teacher. My grandmother and an aunt were teachers so maybe they influenced me to take an interest towards this profession. After my graduation I was sure I wanted to take up teaching profession and filled the form for B.Ed Programme of Kuvempu University. Luckily I got admission in Kumadvathi College of Education in the Second counselling. I chose this college because of the good reviews and also the infrastructure is so beautiful that this campus looks like mini university campus that to in the rural area headed by the Sri B S Yeduyurappa, Former chief minister of Karnataka and Sri B Y Raghavendra, Member of Parliament Shivamoga constituency. I have heard, good opinion from some people and seniors about this college. My dreams come true to study in this college.

During my B.Ed. Programme, I can say that I have got the opportunity to study varied subjects and do so many activities which I had never done before. I had the perception that B.Ed Programme would be much easier than what I had previously done. But I was proven wrong. The course had all new subjects, some of which I had previously no idea about. I had to study Psychology, Philosophy, Understanding pedagogy, Language across the curriculum, School Organization and Management, Guidance and Counselling, Assessment in Learning and pedagogy subjects. They were very new and a little difficult for me but also very interesting. After learning about these subjects for some time, I was able to understand them, and they appeared very interesting and significant to me.

Our college infrastructure is so good that any student teacher can full fill his all the requirements under one roof. This opportunity is available in very few colleges of Karnataka and we are all very lucky and fortunate enough to learning this college. We are utilising following facilities in during my training.

**Classrooms and Laboratories :** A spacious well- lit and fully ventilated classroom provides an ideal atmosphere for learning activities. The college has separate labs for Psychology, Educational Technology and Science.

**Computer Lab :** Computer lab with adequate number of systems with advanced software is available. LAN with free Internet facility is also provided. A well trained instructor trains the students to handle the computers professionally

**Language Lab :** Language Lab with adequate number of equipment's with advanced software is available. A well trained instructor trains the students

**Library :** Library is well equipped with sufficient number of lighting and hygienic well ventilated natural light and fresh air in abundance. Reading tables and chairs and systematically arranged to accumulate 100 students at time. Library Department consist the following Staff- one librarian with one Library assistant.

**Sports & Games :** Our college provides ample facilities and scope for various games and sports both indoor and outdoor, such as cricket, basketball, volley ball, badminton, table tennis, kabaddi, kho-kho, chess, carom, athletics and yoga education etc., to keep the mind and body healthy.

**Transportation :** The institution provides transportation facilities to the students from College to town and hostel.

**Hostel Facilities :** Hostel facilities with all the provisions are available for both men and women. Food Facility is available. They should follow the rules and regulations of the hostel framed from time to time.

**Information & Communication Technology:** We live in the Information Age, where computers are used as personal productivity tools and for entertainment. Teachers making use of computer technology have more ways than ever to engage their students.

## INTERNSHIP EXPERIENCE

School internship is an important part of Teacher's Training Program. Our college every semester sends the students for internship in different schools. I had been sent to Moulana azad model School. Shikaripura. Basically in the 1st year of internship we had to work and make report on 3 aspects i.e. at least 10 observation classes, and observing the teacher's classes and school regular activities observation (from class 6th to 9th). Our mentor teacher educator introduced us to principal and she provided us a separate room.

Before sending to schools my college had given training about micro-teaching i.e. about the teaching skills. We have practiced, around ten basics skills in simulated condition. Micro teaching practicing session is the one of the major event in the training programme and our teacher educators guided in all the

way to master over the various skills. In the IV the semester we have internship of 14 weeks. These internship days are very challenging. During these days we have to teach the students of Primary and secondary school students. Lesson plan approval, teaching aid preparation and taking the approval from concerned subject teacher seems very tough but with the help of teacher educators we had successfully completed the lesson teaching. Along with the teaching tasks, we have conducted action research, unit plan, unit test followed by remedial teaching, resource unit preparation and also organising CCA programme. maintaining daily diary and observation records etc.

## Organisation of CCA

Organisation of CCA on a regular basis ie on every Friday is one of the major activity in our college. Where hosting team organises the CCA programme we had participated actively in the in the competition and our team had got good number of prizes. Under various clubs we had an opportunity to hosting and participating in various enrichment programmes. These programmes help me in developing leadership quality, organisational skills and Cooperation, coordination and it help me to overcome with stage fear.

SUPW

This is one of the major skill based activities that our college is organising on every Saturday. During these activities, we got mastery over the various psychomotor skills and also utilise the waste material and resources in the fullest extent and involved in preparing socially useful productive work.

NSS and CTC

NSS and CTC provides and creates a lot of opportunity to serve the rural people and rural areas by organising various activities in the camp such as plantation programme, free health check-up and blood donation camp and organising social awareness programme in the selected village. This camp enriches in developing cognitive, affective and psychomotor skills ie it helps in al round development of student teacher.

## NAAC Accreditation

One of the golden moment of my journey is that our college has got and accredited with A+ grade during our B.Ed. programme. This is the first training college in Karnataka having this golden feather in his crown. It's a proud moment for all of us that we are the student teachers of this esteemed college.

These golden days taught me so much. At that day I felt the importance and value of B.Ed Programme. I felt so blessed that almighty had selected such a valuable profession for me. Indeed, I had learned a lot from this college so I will never be going to forget these magical days of my life.



**AISHWARYA R.**
IV Sem., B.Ed., Student Teacher

**"Some of the brightest minds in the country can be found on the last benches of the classroom.**

- Dr. APJ Abdul Kalam



# NSS AND CTC CAMP TAUGHT THE VALUE OF LIFE

The Motto of NSS "Not Me but You" reflects the essence of democratic living and upholds the need for self-less service. NSS helps the me development & appreciation to other person's point of view and also show consideration towards other living being.

Our Kumadvathi Collge of Education organised the NSS and CTC in the Kalenahalli village of Shikaripura taluk from 30th May to 5th June 2023.This is my first experience as a NSS volunteer, during my previous studies I never attended the NSS camp. Place chosen for the NSS camp was very wonderful and having very scenic beauty and had a lot of opportunity for community service.

Our college has provided the opportunity to participate in the Camp. The best part about NSS is that it gave us the opportunity to talk to the people from the different social strata — the poor, the rich, the needy, the humiliated, the successful ones, the struggling ones and many more. This camp allowed all of us to share a new responsibility such as a Flag hoisting, yoga practice, maintaining cleanliness, food department, maintain discipline, Shramadana, hosting lecturing, CCA programme, community services and awareness programme on a daily basis. Each day we all come up new experience, new responsibilities and new learning.In the camp, we organized, NSS.Swachh bharath Programme, blood donation camp, free health check-up campaign, plantation programme, health and environmental awareness programme. All these community service programmes helps me, in developing the feeling of social responsibility and service motto.

My experience in NSS camp was too good.I have learnt many things like discipline, time management, mingle with others and many more. There we must wake up at 4.30 AM. it was mandatory to follow the rules and regulations formed by our NSS guide and then we used to get 15 min break for fresh up. Within 6.00 A M we must assemble in class for prayer. We used to sing NSS song. After that we had yoga class. We must be there on time to have breakfast, then till 12.30 we have to do social works, in between this, we have to do our own work like washing our clothes and all. At sharp 1.30pm we had lunch break till 2.30. Then we will have a lecturing programme on various social concerned issues by the resource persons. After the lecturing session we get an hour of break to practice for evening's cultural program. Many people from that place came to see our programme and supported us. There we had a better relationship with the rural people. I learnt to mingle us with the people. I love doing social work and have got a big chance to do it in NSS camp.

### During my seven days' camp, I learned and experiencing the following aspects.

- Sharing is caring: I have my food together often sharing your plate with two or three.
- Discipline: during the camp, we are given a fixed schedule and it requires us to wake up at 4.00 A M, followed by exercise and so on. Having a routine induces discipline in our day to day life.
- I learn to work as a team: several teams are formed and we are assigned different tasks or games.
- Understanding ground realities: living in the comforts of our homes, we fail to realize grassroots level problems. Once I get exposed or when we are assigned task which involves physical work. I realize it is not as easy as it sounds. The idea behind this is to promote dignity of labour
- Time management: every task is given a fixed time within which we have to complete it. Tasks and games include skit, mime, debates etc.
- leadership Skills: I also get several other benefits like leadership qualities, adjust with limited facilities, game tactics etc.
- lot of fun: field trips, games, camp fire and other activities makes the camp memorable.
- I learn to cook: as I said earlier, each team will have to take up mess duty on a particular day. Hence for me personally, I learnt basics of cooking from novice.
- I learn to socialise: since Phones were not allowed, I spent most of the time talking with friends.
- Make a lot of friends: last but not the least, staying together for 7 days and working as a team lead us to have accrues one friendship.
- Get rid of stage fear: here, I got a lot of opportunities to perform in stage whether it isdance, music or literary etc.

I was very happy. NSS is the best platform to overcome with the fear. It makes us confident. It also gives more experiences. I never stay out without my parents, but I stayed with my friends there I have got one new family. We used to work together, enjoy together it was a wonderful experience for me. My experience in NSS camp is unforgettable. It gave me a truck loads of experiences, sweet and unforgettable moments. I really miss those days and my friends. I am very thankful to Principal, NSS co coordinators and all the teaching and non-teaching and my beloved friends of Kumadvathi college of education for socialising me and developing the attitude of "Not Me but You".



I never thought that I was going to feel this way at the end but, yes, I returned home with a heavy heart that camp was over already.

**SOWMYA L.**
IV Sem., B.Ed., Student Teacher

## SIT DOWN WHILE YOU EAT: IT MAKES A BIG DIFFERENCE



When it comes to our health how we eat matters as much as what we eat. In this fast moving age, fast food is increasingly becoming a staple diet for many, and fast eating has become a common practice.

Eating while standing or while rushing to your next chore is termed as 'mindless' eating, because we have no thought or respect for what we are eating or putting in our bodies while rushing. Eating while standing or eating in a hurry can result in consuming more than our body requires. While we are sitting down and eating, our body knows when to stop. It is very important to note that how we eat affects our body and our health. The popular saying 'we are what we eat' can also be coined as 'we are how we eat'.

Until a decade ago, in many Indian households sitting down on the floor while eating was the custom. While some still follow this practice, majority of us have adapted to using the dining tables. In some cases, even standing and eating, which in fact are catching up in many metropolises, as finding a place to sit becomes harder.

**Sitting down to eat make a difference**

When we sit down on the floor the cross-legged pose which we take aids digestion. In yoga, this pose is called sukhasana or half padmasna, which makes one calmer and slightly more conscious. It is believed that when one sits in this pose in front of food it automatically signals our brain to prepare for digestion.

Besides that having a plate on the floor naturally tends to make us bend forward and back for every mouthful. This movement causes the muscles in our abdomen to be activated which helps in increased secretion of stomach acids – making it easier to digest food.

**Here are few health benefits of sitting on the floor to eat:**

**Lose Weight**

Sitting on the floor to eat is considered as best position to eat food and it can be a great way to lose weight or rather help maintain the ideal weight. Because this position helps us control the amount of food we eat and make us feel full faster. How does that work? Well, since sitting down contracts the muscles in the abdomen, the vagus nerve – the nerve that transmits signals from the stomach to the brain – informs your brain that we are full, thereby preventing overeating and bingeing. Plus, this position makes us eat slower than we would while standing or sitting on a table.

**Makes Us More Flexible**

In this position the muscles in our lower back, pelvis, around our stomach and those of the upper and lower abdomen stretch. This in turn helps our digestive system relax and stay in a normal position. Moreover, this position does not compress your stomach in helping us eat and digest better. The regular stretching of these essential muscles also helps us more flexible and healthy. A study published in the European Journal of Preventive Cardiology found that people who sat on the floor in padmasana were able to get up without any support were more likely to live longer.

**Mindful Eating**

Not only does this position help us focus on our food, but it also helps us make better choices when we eat. How? Well, since our mind is calmer and our body ready to accept nutrition, sitting on the floor is the best way to eat the right amount and right kinds of food. It is believed in Ayurveda that when we our minds is calmer we tend to be better position to concentrate on every aspect of the food – its smell, taste, texture and so on – thus making enjoy our food more.

**Strengthens the Heart**


It is common knowledge that eating increases our body heat, as it requires more energy to burn the food. This is why sometimes we feel warmer and in some cases even sweat. To keep up with this process, our heart works overtime to help out our digestive system. When our feet are below our heart, as in when sitting on a chair, the blood circulation is being directed to your feet, as opposed to when we sit cross-legged on the floor where your heart receives the benefit of better circulation. Thus, sitting on the floor and eating, gives us a healthy heart with strong muscles to help it cope with the pressures of daily life.

It's easy to get in to habits and forget about little things that can make a big difference in our lives. This small change in our eating can bring us more benefits than we can imagine. After all, eating is one of few activities that we all love and relish.



**PAVITHRAKUMARI**
II Sem., B.Ed., Student Teacher

## RASHTRIYA EKTA DIWAS



Rashtriya Ekta Diwas, It is observed on 31st October in India and is also known as National Unity Day. The day honours the legacy of Sardar Vallabhbhai Patel. Let us have a look at the history and significance of the day.

National Unity Day commemorates the birth anniversary of Sardar Vallabhbhai Patel, India's first Home Minister, who played an important role in persuading many princely states to join the Union of India. He is famously known as Iron Man of India and as one of the founding leaders of the Republic of India.

**Rashtriya Ekta Diwas: History**

2014, the Government of India introduced Rashtriya Ekta Diwas or National Unity Day with an aim to pay tribute to Sardar Vallabhbhai Patel on his birth anniversary. He is always remembered for his extraordinary works for the country and no doubt, he worked hard in keeping India united.

Rashtriya Ekta Diwas was inaugurated by Prime Minister Narendra Modi in 2014, by paying tribute to the Sardar Vallabhbhai Patel's statue and flagging of a program which was known as 'Run For Unity' in New Delhi. Run for unity was held to spread awareness about Sardar Vallabhbhai Patel's contribution to Indian history.

**Rashtriya Ekta Diwas : Significance**

As per a statement by the Home Ministry, the day provides "an opportunity to re-affirm the inherent strength and resilience of our nation to withstand the actual and potential threats to the unity, integrity, and security of our country". India is a diverse nation so it is very important to maintain unity. The Government of India has constructed a huge statue of Sardar Vallabhbhai Patel near the Narmada River in Gujarat in memory of the Iron Man of India.

**Rashtriya Ekta Diwas : Celebration**

In 2019, on Rashtriya Ekta Diwas, Narendra Modi administered the National Unity Day Pledge at the Statue of Unity in Kevadia. He also reviewed the Rashtriya Ekta Diwas parade presented by various police contingents from all over the country.

Pledge is "I solemnly pledge that I dedicate myself to preserve the unity, integrity, and security of the nation and also strive hard to spread this message among my fellow countrymen. I take this pledge in the spirit of unification of my country which was made possible by the vision and actions of Sardar Vallabhbhai Patel. I also solemnly resolve to make my own contribution to ensure the internal security of my country."

Sardar Patel National Unity Award seeks to recognize notable and inspiring contributions to promote the cause of national unity and integrity and to reinforce the value of a strong and united India. On the occasion of National Unity Day (31st October), the award will be announced.

On this day, in several schools and colleges, a variety of cultural activities are also performed including banners, poster making, essay competition, speech reciting, quiz competition, paintings, debate, etc.

**Facts about Sardar Vallabhbhai Patel**

- The full name of Sardar Vallabhbhai Patel is Vallabhbhai Jhaverbhai Patel.
- He was born on 31 October 1875 at Nadiad, Gujarat, India and died on 15 December 1950 at Bombay.
- During the first three years of Indian independence, he served as Deputy Prime Minister, Minister of Home Affairs, Minister of Information, and Minister of States.
- He attended primary school at Karamasad and high school at Petlad.
- He married at the age of 16, matriculated at 22, and passed the district pleader's examination due to which he was able to practice law.
- In Godhra, he set up an independent office of district pleader in 1900.
- In August 1910, he went to London for further studies.
- In 1913, he returned to India and settled in Ahmadabad and become the leading barrister in criminal law at the Ahmadabad bar.
- He served as the first Indian municipal commissioner of Ahmadabad from 1917 to 1924 and was elected as a municipal president from 1924 to 1928.
- In 1918, he made his first mark by a mass campaign of peasants, farmers, and landowners of Kaira, Gujarat, against the decision of the Bombay government. Despite crop failures due to heavy rains, the government wanted to collect full annual taxes.
- In 1928, he successfully led the Bardoli campaign and earned the title Sardar that is "leader".
- Sardar Vallabhbhai Patel was the second candidate after Mahatma Gandhi to the presidency of the 1929 Lahore session of the Indian National Congress.
- In 1931, he presided over the Karachi session of the Indian National Congress.
- He was the first chairman and founder of the Edward Memorial High School Borsad (E.M.H.S) now, it is known as Jhaverbhai Dajibhai Patel High School.


Sardar Vallabhbhai Patel always worked hard to make India a United India (Ek Bharat). To create Shreshth Bharat or Foremost India, he requested the people of India to live together. Being the first Home Minister and Deputy Prime Minister, he played an important role in the integration of many Indian princely states to make an Indian federation.

Such great people have made their mark in the history of India and worked to build and develop the country and are role models for all of us. Let us all develop the spirit of achievement and patriotism like him.



**SHANTHA K**
II Sem., B.Ed., Student Teacher

# MORAL VALUES




Moral values are considered an essential aspect of human life. Moral values determine one's nature, behaviour and overall attitude towards life and other people. In our lives, our decisions are primarily based on our values. The choices we make in our lives impact us and our society, organisation and nation. It is believed that a person with good values makes wise decisions that benefit everyone. On the contrary, people who have no moral values think only of themselves. They don't care about others' needs or society and make choices based solely on their needs. They create an unfriendly and sometimes unsafe environment around themselves.

**Importance of Moral Values**

The value of a person reflects their personality. Moral values help us understand the difference between right and wrong, good and evil and make the right decisions and judgements. They empower and drive a person to be a better human being and work for the betterment of society. Some moral values a person can inculcate in themselves are: dedication, honesty, optimism, commitment, patience, courtesy, forgiveness, compassion, respect, unity, self-control, cooperation, care and love. A person becomes humble and dependable with good values. Everyone looks up to a person with good values, whether personally or professionally. If a person has good values, he spreads love, joy, and positive vibes. A person with good values works for the upliftment of society, along with taking care of their life. Such people are always considerate of the needs of others and understand the importance of unity and teamwork. They don't lose their temper very easily and forgive others. People with good values are an asset to the organisation they work in and the society they live in.

**Values Must Be Imbibed**

We need to imbibe good values to function as humans and live in a society. Good values include dedication towards work, honesty, respect, commitment, love, helping others, taking responsibility for others' deeds and acting responsibly. All these values are essential for the positive growth of an individual.

If you want to become a true leader and inspire others, you need to have good values. People always show respect and love to a person with good values. Additionally, they'll trust and depend on a person of good values because they get proper advice and opinion from such a person.

**Ethics Must Be Followed**

A person with good values behaves ethically. We often hear of an ethical code of conduct. These are a set of rules or codes an individual is expected to follow. For example, talking politely with others, respecting elders/co-workers, handling difficult situations calmly, maintaining discipline and acting responsibly. Following these ethics helps create a healthy and safe work environment. So, it is essential for everyone to follow the ethical code of conduct.

**The Role of Parents and Teachers**

Moral values are not just born in a person but must be taught and inculcated right from childhood. When we talk about raising or nurturing children with good values, the credit goes to parents and teachers. It is their responsibility to teach children good values and should make them understand why it's necessary to follow ethical behaviour. Schools should also take the responsibility to have a separate class dedicated to teaching ethics and moral values from the beginning. They should also train the students so that they imbibe these values.

**Conclusion**

An individual should imbibe good moral values to do well both in their professional and personal lives. A person with good values is also recognised among the crowd and is always appreciated for his behaviour and attitude towards others. On the contrary, people who lack good values often get into trouble and are not accepted in society. So, we should make sure that we teach our children good values and ethical behaviour from an early age. It is our responsibility to make our future generation learn moral values and ethics. This will help them become good human beings and upstanding citizens of the world. Additionally, it will give them the strength and courage to achieve great things in their lives.



**NAGARAJA**
II Sem., B.Ed., Student Teacher


---

# ಖಗೋಳದ ಕೌತುಕ ಚಂದ್ರಯಾನ–3 ಮತ್ತು ವೈಜ್ಞಾನಿಕ ಮನೋಭಾವ

ದೇಶದ ವರ್ಚಸ್ಸನ್ನು ಎತ್ತರಿಸುವ ಉದ್ದೇಶವುಳ್ಳ ಚಂದ್ರಯಾನ–3 ಗಗನದೆಡೆಗೆ ಚಿಮ್ಮಿ 3,900 ಕಿಲೋ ಭಾರದ ನೌಕೆಯನ್ನು ಕಕ್ಷೆಯಲ್ಲಿ ಸೇರಿಸಲು ಇಸ್ರೋ ಯಶಸ್ವಿಯಾಗಿದೆ. 2019ರ ಚಂದ್ರಯಾನ–2ರ ವೈಫಲ್ಯದ ತಳಹದಿಯ ಮೇಲೆ ಚಂದ್ರಯಾನ–3 ನಿಂತಿದ್ದಲ್ಲದೇ ಯಶಸ್ವಿಯಾಗಿ ಆಗಸ್ಟ್ 23ರ ಸಂಜೆ 6:04 ನಿಮಿಷಕ್ಕೆ ಚಂದ್ರನ ದಕ್ಷಿಣ ಧ್ರುವದ ಮೇಲೆ ಇಳಿಯುವುದರ ಮೂಲಕ ಅಮೇರಿಕಾ, ರಷ್ಯಾ, ಚೀನಾದ ಬಳಿಕ ಈ ಸಾಧನೆ ಮಾಡಿದ ನಾಲ್ಕನೆಯ ದೇಶವಾಗಿ ಭಾರತ ವಿಶ್ವದಲ್ಲಿ ಗುರುತಿಸಿಕೊಂಡಿತು. ಅಲ್ಲದೇ ಚಂದ್ರನ ದಕ್ಷಿಣ ಧ್ರುವದ ಮೇಲೆ ನೌಕೆಯನ್ನು ಇಳಿಸಿದ ದೇಶ ಭಾರತ ಮೊದಲನೆಯದು ಎಂದು ಖ್ಯಾತಿಯನ್ನು ಹೊಂದಿತು. ಸುಮಾರು 630 ಕೋಟಿ ರೂ. ವೆಚ್ಚದಲ್ಲಿ ಈ ಯೋಜನೆ ಸಿದ್ಧಗೊಂಡಿದೆ. ಈ ಹಿಂದಿನ ವಿಫಲ ಯೋಜನೆಗೆ ವೆಚ್ಚ ಮಾಡಿದ ಹಣವನ್ನು ಸೇರಿಸಿದರೆ ಈ ಮೊತ್ತ ಇನ್ನಷ್ಟು ದೊಡ್ಡದಾಗುತ್ತದೆ. ಆದರೆ ನೌಕೆ ಚಂದ್ರನನ್ನು ತಲುಪುವಲ್ಲಿ ಯಶಸ್ವಿಯಾಗಿ, ಅದು ಚಂದ್ರನ ಮೇಲ್ಮೈಯ ಕುರಿತಂತೆ ಮಹತ್ತರ ಸಂಶೋಧನೆಗಳನ್ನು ಭೂಮಿಗೆ ರವಾನಿಸುವುದರ ಮುಂದೆ ಈ ವೆಚ್ಚ ಅತ್ಯಲ್ಪ. ಚಂದ್ರಯಾನ ಯಶಸ್ವಿಯಾಗಿ ಖಗೋಳ ಕ್ಷೇತ್ರದಲ್ಲಿ ಭಾರತದ ವರ್ಚಸ್ಸನ್ನು ಹಿಗ್ಗಿಸಿದೆ. ಅನೇಕ ಕುತೂಹಲಕಾರಿ ಮಾಹಿತಿಗಳನ್ನು ಭೂಮಿಗೆ ರವಾನೆ ಮಾಡುವುದರ ಮೂಲಕ ಸಾಕಷ್ಟು ಹೊಸ ಸಂಶೋಧನೆಯನ್ನು ಕೈಗೊಂಡಿರುವುದು ನಮ್ಮೆಲ್ಲರ ಹೆಮ್ಮೆಯ ಸಂಗತಿ.

ರಷ್ಯಾದ ಯೂರಿ ಗಗಾರಿನ್ ಎಂಬ ಮೊದಲ ಗಗನಯಾತ್ರಿ, ಚಂದ್ರನ ಮೇಲೆ ಪಾದ ಸ್ಪರ್ಶ ಮಾಡಿದ ಮೊದಲ ಮಾನವ ಅಮೆರಿಕದ ನೀಲ್ ಆರ್ಮ್‌ಸ್ಟ್ರಾಂಗ್, ವೆಲೆಂಟೈನ ಟೆರೆಶ್ಕೋವ ಎಂಬ ಮೊದಲ ಮಹಿಳಾ ಗಗನಯಾತ್ರಿ, ಭಾರತದ ರಾಕೇಶ್ ಶರ್ಮಾ ಮತ್ತು ಅವರ ಸಹಾಯಕ ರವೀಶ್ ಮಲ್ಹೋತ್ರ ಎಂಬ ಭಾರತದ ಮೊದಲ ಗಗನಯಾತ್ರಿಗಳು, ಕಲ್ಪನಾ ಚಾವ್ಲಾ ಮತ್ತು ಸುನೀತಾ ವಿಲಿಯಮ್ಸ್‌ಎಂಬ ಭಾರತೀಯ ಮೂಲದ ಇಬ್ಬರು ಗಗನಯಾತ್ರಿಗಳು ಮತ್ತು ವಿಶ್ವದ ಇತರೆ ದೇಶಗಳ ಕೆಲವು ಗಗನಯಾತ್ರಿಗಳು, ಹಗಲು ರಾತ್ರಿ ಖಗೋಳ ನಿಗೂಢ ಬೇದಿಸಲು ನಿರಂತರ ಪ್ರಯತ್ನ ಮಾಡುತ್ತಿರುವ ಎಲ್ಲಾ ಖಗೋಳ ಶಾಸ್ತ್ರಜ್ಞರಿಗೂ ಕೃತಜ್ಞಾಪೂರ್ವಕ ಧನ್ಯವಾದಗಳು.

ಈ ನಿಟ್ಟಿನಲ್ಲಿ ಭಾರತದ ಹೆಮ್ಮೆಯ ಹೆಸರುಗಳಾದ ಆರ್ಯಭಟ ಮತ್ತು ವಿಕ್ರಮ್ ಸಾರಾಭಾಯಿ ಅವರನ್ನು ಸ್ಮರಿಸುತ್ತಾ, ಮನೆಯ ಮಹಡಿಯ ಮೇಲೆ ನಿಂತು ಕೆಳಗೆ ನೋಡಲು ಭಯವಾಗುವ ಮನಸ್ಥಿತಿಯ ನಾವು, ವಿಮಾನದ ಹಾರಾಟವನ್ನೇ



ಕುತೂಹಲದಿಂದ ವೀಕ್ಷಿಸುವ ನಾವು, ಅನಂತ ಆಗಸದಲ್ಲಿ ಮಿಂಚಿನ ವೇಗದಲ್ಲಿ ಪ್ರಯಾಣಿಸುವುದನ್ನು ಊಹಿಸಿಕೊಳ್ಳುವುದು ಕಷ್ಟ. ಭೂಮಿಯಿಂದ ಸುಮಾರು 3.84.400 ಕಿಲೋಮೀಟರ್ ದೂರದಲ್ಲಿ ಇರುವ ಚಂದ್ರನಲ್ಲಿಗೆ ಮನುಷ್ಯನ ಪ್ರಯಾಣವೇ ಇರಬಹುದು ಅಥವಾ ಅಲ್ಲಿ ಕೆಲ ದಿನಗಳ ವಾಸವೇ ಇರಬಹುದು ಅಥವಾ ಮಾನವ ರಹಿತ ಸಂಶೋಧನಾ ಯಂತ್ರ ಕಳಿಸುವುದೇ ಇರಬಹುದು, ಮತ್ತು ಅದನ್ನು ಇಲ್ಲಿನಿಂದಲೇ ನಿಯಂತ್ರಿಸುವುದು ಇರಬಹುದು ಹಾಗೂ ಬಾಹ್ಯಾಕಾಶ ಕೇಂದ್ರದಲ್ಲಿ ಅಧ್ಯಯನ ಮಾಡುವುದೇ ಇರಬಹುದು ಎಲ್ಲವೂ ಸಾಮಾನ್ಯರ ಕಲ್ಪನೆಗೆ ಮೀರಿದ್ದು.

ಎಲ್ಲಾ ಸೌಕರ್ಯಗಳ ನಡುವೆಯೂ ಒಂದು ವಾರದ ದೂರ ಪ್ರವಾಸ ಅಥವಾ ಒಂದು ತಿಂಗಳ ವಿದೇಶ ಯಾತ್ರೆ ಅಥವಾ ಕೆಲವು ತಿಂಗಳ ಹೊರ ರಾಜ್ಯದ ತರಬೇತಿ ಅಥವಾ ಒಂದೆರಡು ವರ್ಷಗಳ ಶೈಕ್ಷಣಿಕ ಪ್ರವಾಸ ಇಷ್ಟಕ್ಕೇ ಸಾಕಷ್ಟು ಮಾನಸಿಕ ಒತ್ತಡಕ್ಕೆ ಒಳಗಾಗುವ ನಾವು ಯಾರ ನೇರ ಒಡನಾಟವಿಲ್ಲದೇ ಕೇವಲ ಧ್ವನಿ ಸಂಪರ್ಕ ಮಾತ್ರದೊಂದಿಗೆ ಲಕ್ಷಾಂತರ ಕಿಲೋಮೀಟರ್ ದೂರಕ್ಕೆ ಪ್ರಯಾಣಿಸಿ ಕೆಲ ಸಮಯ ಅಲ್ಲಿ ವಾಸಿಸುವ  ರೀತಿಯೇ ಕನಸಿನ ಲೋಕದಂತೆ ಭಾಸವಾಗುತ್ತದೆ. ತಂತ್ರಜ್ಞಾನ, ತರಬೇತಿ, ದೈಹಿಕ ಮತ್ತು ಮಾನಸಿಕ ಸಿದ್ದತೆ ಗಗನಯಾತ್ರಿಗಳಿಗೆ ಇರುತ್ತದೆ ಎಂಬುದು ನಿಜ. ಆದರೆ ಸಾಮಾನ್ಯ ಜನರಾದ ನಮಗೆ ಇದು ಒಂದು ವಿಸ್ಮಯ ಲೋಕ. ಅಲ್ಲಿನ ಊಟ, ಸ್ನಾನ, ಆರೋಗ್ಯದ ವ್ಯತ್ಯಾಸ, ಒಂಟಿತನದ ಬೇಸರ, ಹಗಲು ರಾತ್ರಿಗಳು ಕಳೆಯುವ ರೀತಿ, ಅಲ್ಲಿನ ನೀರವತೆ, ಸಾವಿನ ಭಯ, ಪ್ರೀತಿ ಪಾತ್ರರ ನೆನಪು ಎಲ್ಲವನ್ನೂ ನಿಭಾಯಿಸುವ ರೀತಿ ನಿಜಕ್ಕೂ ಬಹುದೊಡ್ಡ ಸವಾಲು. ಏಕೆಂದರೆ ಅವರು ಸಹ ಮನುಷ್ಯರೇ ಅಲ್ಲವೇ. ಬಾಹ್ಯಾಕಾಶ ಸಂಶೋಧನಾ ವಿಜ್ಞಾನದಲ್ಲಿ ಅಮೇರಿಕಾ ಮತ್ತು ರಷ್ಯಾ ಸಾಕಷ್ಟು ಅಭಿವೃದ್ಧಿ ಹೊಂದಿವೆ ಮತ್ತು ಅದರ ಮೇಲೆ ನಿಯಂತ್ರಣ ಸಾಧಿಸಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಚೀನಾ, ಫ್ರಾನ್ಸ್, ಜರ್ಮನಿ ಮತ್ತು ಭಾರತ ಸಹಾ ಅತಿವೇಗದಲ್ಲಿ ತಮ್ಮ ಛಾಪು ಮೂಡಿಸುತ್ತಿವೆ.

ವಿಷಯ ಯಾವುದೇ ಇರಲಿ. ಆ ಬಗ್ಗೆ ಕನಿಷ್ಠ ಮಟ್ಟದ ಕುತೂಹಲ ಬೆಳೆಸಿಕೊಳ್ಳುವ ಮನೋಭಾವ ಇದ್ದರೆ ಅದು ನಮ್ಮ ಮಾನಸಿಕ ಬೆಳವಣಿಗೆಯ ದೃಷ್ಟಿಯಿಂದ ಉತ್ತಮ. ಬಹಳಷ್ಟು ಜನ ಕೆಲವು ವಿಷಯಗಳು ನಮಗೆ ಸಂಬಂಧಿಸಿಲ್ಲ ಎಂದು ನಿರ್ಲಕ್ಷ್ಯ ಮಾಡುತ್ತಾರೆ. ಅದು ಒಟ್ಟು ವ್ಯಕ್ತಿತ್ವ ವಿಶಾಲವಾಗದೆ ಸಂಕುಚಿತಗೊಳ್ಳಲು ಕಾರಣವಾಗಿದೆ. ನಮಗೆ ರಾಜಕೀಯ ಬೇಡ, ವಿಜ್ಞಾನ ಬೇಡ, ಕಲೆ ಸಾಹಿತ್ಯ ಸಂಗೀತ ಕ್ರೀಡೆ ಬೇಡ, ಆರ್ಥಿಕ ಚಟುವಟಿಕೆಗಳ ಮಾಹಿತಿ ಬೇಡ ಎಂದು ಅದರಿಂದ ದೂರವಿದ್ದು ಕೇವಲ ತಮ್ಮ ಹಣ ಸಂಪಾದನೆ, ತಮ್ಮ ಕುಟುಂಬ ಮತ್ತು ಅದರ ನಿರ್ವಹಣೆಯ ಸುತ್ತಲೇ ಇಡೀ ಜೀವನ ರೂಪಿಸಿಕೊಂಡಿರುವ ಪರಿಣಾಮವೇ ಇಂದು ನಾವುಗಳು ಅಲ್ಪಮತಿಗಳಾಗುತ್ತಿರುವುದು.

ನಮ್ಮ ಪಂಚೇಂದ್ರಿಯಗಳನ್ನು ಸ್ವಲ್ಪ ಮುಕ್ತವಾಗಿಡೋಣ. ಸಾಧ್ಯವಿರುವ ಮತ್ತು ಆಸಕ್ತಿ ಇರುವ ವಿಷಯಗಳನ್ನು ಸ್ವಲ್ಪ ಒಳ ಸ್ಪರ್ಶಿಸಲು ಅನುವು ಮಾಡಿಕೊಡೋಣ. ಆ ಮೂಲಕ ಬದುಕಿನ ಗುಣಾತ್ಮಕತೆಯನ್ನು ಉತ್ತಮಗೊಳಿಸಿಕೊಳ್ಳಬಹುದು. ಜೊತೆಗೆ ಮಕ್ಕಳಿಗೆ ಈ ರೀತಿಯ ವಿಸ್ಮಯಕಾರಿ ವಿಷಯಗಳ ಬಗ್ಗೆ ಮಾಹಿತಿ ನೀಡುತ್ತಾ ಅವರ ಕುತೂಹಲ ಕೆರಳಿಸಿದರೆ ಖಂಡಿತ ಮುಂದಿನ ಭವಿಷ್ಯದಲ್ಲಿ ಅವರು ಯಾವುದಾದರೂ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡುವ ಸಾಧ್ಯತೆ ಇರುತ್ತದೆ. ಅನೇಕ ಹೊಸ ಹೊಸ ಸಂಶೋಧನೆಗಳು ರೂಪಗೊಂಡಿರುವುದೇ ಈ ರೀತಿಯ ಕುತೂಹಲಕಾರಿ ಪ್ರಶ್ನೆಗಳ ಮೂಲಕವೇ. ರೇಡಿಯೋ, ರೈಲು, ವಿಮಾನ, ಮೊಬೈಲ್, ಟಿವಿ, ಕಂಪ್ಯೂಟರ್ ಮುಂತಾದ ಎಲ್ಲವೂ ಇದಕ್ಕೆ ಉದಾಹರಣೆಗಳು.

ನಾವು ಮಾಡಬೇಕಿರುವುದು ಮಕ್ಕಳಿಗೆ ಈ ಮಾಹಿತಿಗಳು ಸುಲಭವಾಗಿ ಸಿಗಬೇಕು ಮತ್ತು ಮನೆಗಳಲ್ಲಿ, ಶಾಲೆಗಳಲ್ಲಿ, ಗೆಳೆಯರ ಬಳಗದಲ್ಲಿ ಇದರ ಬಗ್ಗೆಯೇ ಚರ್ಚೆಗಳನ್ನು ಹುಟ್ಟು ಹಾಕಿ ಒಂದು ರೀತಿಯ ಸಾಂಸ್ಕೃತಿಕ ವಾತಾವರಣ ಸೃಷ್ಟಿ ಮಾಡಬೇಕು. ಆಗ ಹೆಚ್ಚೆಚ್ಚು ಉತ್ತಮ ಫಲಿತಾಂಶಗಳು ಬರುತ್ತವೆ. ಟಿವಿ ಧಾರವಾಹಿಗಳನ್ನು, ಸಿನಿಮಾಗಳನ್ನು ವೀಕ್ಷಿಸುತ್ತಾ, ಅದರ ಬಗ್ಗೆಯೇ ಚರ್ಚಿಸುತ್ತಾ, ವಿಡಿಯೋ ಗೇಮ್‌ಗಳಲ್ಲಿ ಅವರನ್ನು ಮುಳುಗಿಸುತ್ತಾ, ಅತಿಯಾದ ಹೋಂ ವರ್ಕ್ ಮತ್ತು ಅಂಕಗಳಲ್ಲಿಯೇ ಅವರನ್ನು ಬಂಧಿಸುತ್ತಾ, ಮನೆ ಕಾರು ಆಸ್ತಿಗಳನ್ನು ಮಾಡುವುದೇ ಜೀವನದ ಬಹುದೊಡ್ಡ ಗುರಿ ಎಂದು ಉಪದೇಶಿಸುತ್ತಾ ಇದ್ದರೆ ಖಂಡಿತ ಈಗ ನೋಡುತ್ತಿರುವ ಅಸಹಿಷ್ಣತಾ ಮತ್ತು ಹಿಂಸಾ ಸಮಾಜದ ನಿರ್ಮಾಣ ಇನ್ನಷ್ಟು ವೇಗ ಪಡೆಯುತ್ತದೆ. ಆದ್ದರಿಂದ ಇನ್ನು ಮುಂದಾದರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ದಿಕ್ಕಿನಲ್ಲಿ ಯೋಚಿಸೋಣ. ಮಾನವೀಯ ಮೌಲ್ಯಗಳ ಪುನರುತ್ಥಾನದ ಹಾದಿಯಲ್ಲಿ ಹೆಜ್ಜೆ ಇಡೋಣ. ಭಾರತದ ಚಂದ್ರ ಯಾನ – 3 ಎಂಬ ಇಸ್ರೋದ ಯೋಜನೆ ಯಶಸ್ವಿಯಾದಂತೆ ಮುಂದಿನ ದಿನಗಳಲ್ಲಿ ಇನ್ನು ಹತ್ತು ಹಲವಾರು ಖಗೋಳಯಾನಗಳು ಯಶಸ್ವಿಯಾಗಲೆಂದು ಶುಭ ಹಾರೈಸೋಣ.. ಮಕ್ಕಳಲ್ಲಿ ಮುಂದೊಂದು ದಿನ ನಮ್ಮ ಕಲ್ಪನೆಯ ಚಂದಮಾಮನಲ್ಲಿ ವಾಸಿಸುವ ಕನಸು ಬಿತ್ತೋಣ.



**ಎಂ.ಜಿ. ಚಂದನ್**
ಚತುರ್ಥ ಸೆಮಿಸ್ಟರ್ ಪ್ರಶಿಕ್ಷಣಾರ್ಥಿ

# ಯಶಸ್ವಿ ಬದುಕಿಗೊಂದು ಸೂತ್ರ

ಇತರರ ಕಷ್ಟ ನೋಡಿ ನಗುವಿನೊಂದಿಗೆ ಕಾಲ ಕಳೆದವರು ಮುಂದೊಂದು ದಿನ ಅಳುವ ಸಂದರ್ಭ ಖಂಡಿತವಾಗಿಯೂ ಬರುತ್ತದೆ "ಕರ್ಮಫಲ ಅನ್ನೋದು ಅದಕ್ಕೇ" ಈ ಮಾತನ್ನು ನಾನು ಯಾವತ್ತೂ ನಂಬುತ್ತೇನೆ. ಹೀಗಾಗಿ ಯಾವತ್ತೂ ಬೇರೆಯವ ಬದುಕಿನ ಬಗ್ಗೆ ಕಥೆ ಕಟ್ಟುವ ವ್ಯಕ್ತಿ ನೀವಾಗಿದ್ದಲ್ಲಿ ಇಂತಹ ಕಾರ್ಯದಿಂದ ದೂರವಿರಿ. ಇತರರ ಸಾಧನೆಯಲ್ಲಿ ಖುಷಿಪಡುವುದನ್ನು ಕಲಿಯಿರಿ. ಏನಾದರೂ ಸಾಧನೆ ಮಾಡಿದಲ್ಲಿ ಅದರ ಕುಂದು ಕೊರತೆ ಯನ್ನು ಹುಡುಕುತ್ತಾ ಹೋದಲ್ಲಿ ನೀವು ಅಲ್ಲಿಯೇ ಇರುತ್ತೀರಿ. ಸಾಧಿಸುವವರು ಮುಂದೆ ಸಾಗುತ್ತಿರುತ್ತಾರೆ. ನಷ್ಟ ಅನುಭವಿಸುವುದು ನೀವು ಒಮ್ಮೆ ಯೋಚಿಸಿ.

"ನಮ್ಮ ದೇಶದ ಆಸ್ತಿ ನಮ್ಮ ಯುವಜನಾಂಗ. ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎನ್ನುವ ಸ್ವಾಮಿ ವಿವೇಕಾನಂದರ ಸಂದೇಶವನ್ನು ಮರೆಯುತ್ತಿದ್ದಾರೆ ನಮ್ಮ ಯುವಕರು. ನಿಮ್ಮ ಜೀವನದಲ್ಲಿ ಸವಾಲುಗಳನ್ನು ಎದುರಿಸಿ ಗೆಲ್ಲಲು ಪ್ರಯತ್ನಿಸಿ, ಜೀವನವನ್ನು ಮುನ್ನಡೆಸಿ, ಇತರರಿಗೆ ಮಾರ್ಗದರ್ಶನ ನೀಡಿ.. ದೇಶದ ಒಳಿತಿಗಾಗಿ ಹೋರಾಡಬೇಕಿದ್ದ ಬಹಳಷ್ಟು ಯುವಕ ಯುವತಿಯರು ಇದೀಗ ಆತ್ಮಹತ್ಯೆ, ಧೂಮಪಾನ, ಕುಡಿತ, ಕೆಲಸಕ್ಕೆ ಹೋಗದೆ ಮನೆಯಲ್ಲಿರುವುದು. ಧರ್ಮಕ್ಕಾಗಿ, ಆಸ್ತಿಗಾಗಿ ಕಚ್ಚಾಟ ಮಾಡುವುದು, ಇನ್ನೂ ಹತ್ತು ಹಲವಾರು ಕಾರಣದಿಂದ ಬದುಕನ್ನು ನಶಿಸಲು ಕಾರಣಕರ್ತರಾಗಿದ್ದಾರೆ. ಮುಂದೊಂದು ದಿನ ತಾವು ಮಾಡಿದ ತಪ್ಪು ಅರಿವಾಗುವಷ್ಟರಲ್ಲಿ ಕಾಲ ಮಿಂಚಿಹೋಗಿರುತ್ತದೆ ಸಮಯ ಕಳೆದಿರುತ್ತದೆ. ಬದುಕು ನದಿಯಂತಿರಬೇಕು ಕಷ್ಟ ಬಂದಾಗ ಎದುರಿಸಿ ಮುಂದೆ ಸಾಗುತ್ತಾ ಧೈರ್ಯದಿಂದ ಎದುರಿಸಬೇಕು. ಅತಿಯಾದ ನಿರೀಕ್ಷೆ ಮನಸ್ಸಿನಲ್ಲಿಟ್ಟು ಮುಂದೊಂದು ದಿನ ಅದು ಕಾರ್ಯಗತವಾಗದಿದ್ದಲ್ಲಿ, ತಪ್ಪು ನಿರ್ಧಾರ ತೆಗೆದು ಆತ್ಮಹತ್ಯೆ ಮಾಡುವ ಜನರನ್ನು ನೋಡುವಾಗ ನಿಜಕ್ಕೂ ಬೇಸರವಾಗುತ್ತಿದೆ. ಪ್ರತಿಯೊಬ್ಬರಿಗೆ ಸಂಕಷ್ಟ ಇರುತ್ತದೆ, ಕಷ್ಟವಿಲ್ಲದ ಜೀವನವಿಲ್ಲ.

ಯಾವೊಂದು ಕಾರಣಕ್ಕೂ ಜೀವನದಲ್ಲಿ ನಡೆದ ಒಂದು ಕಹಿ ಘಟನೆಯನ್ನು ನೆನಪಿಸಿಕೊಂಡು ಅತ್ಯಮೂಲ್ಯವಾದ ಜೀವನವನ್ನು ಹಾಳು ಮಾಡದಿರಿ. ನಿಮ್ಮ ಬದುಕಿನ ಏಳು ಬೀಳಿಗೆ ನೀವು ಕಾರಣ ಕರ್ತರಾಗುತ್ತೀರಿ. ಕಷ್ಟವನ್ನು ಸರಿಪಡಿಸುವ ಬಗ್ಗೆ ನಿಮ್ಮ ನಿಲುವಿರಲಿ. ಯಾವುದಾದರೂ ಒಂದು ಕಾರಣದಿಂದ ನೀವು ಖಿನ್ನತೆಗೆ ಒಳಗಾಗಿದಲ್ಲಿ ಸೂಕ್ತ ವೈದ್ಯರನ್ನು ಭೇಟಿ ಮಾಡಿ,




ನಿಮ್ಮವರಲ್ಲಿ ಮಾತಾಡಿ ಪರಿಹಾರ ಹುಡುಕುವುದು ಮುಖ್ಯ. ಬೇರೆಯವರು ನಿಮ್ಮ ಬಗ್ಗೆ ಏನು ಯೋಚಿಸುತ್ತಾರೆ ಎನ್ನುವುದನ್ನು ಬಿಟ್ಟುಬಿಡಿ. ಇಂತಹ ಯೋಚನೆಯಲ್ಲಿ ನೀವು ವಿಫಲರಾದರೆ ಮುಂದೆ ಬದುಕಿನ ಸಂಪೂರ್ಣ ಪರೀಕ್ಷೆಯಲ್ಲಿ ನೀವು ಸೋತು ಹೋಗುತ್ತೀರಿ. ಕಷ್ಟ ಸರಿಪಡಿಸುವ ದಾರಿ ಹುಡುಕಿ, ಕೊರಗಿ ಪ್ರಯೋಜನವಿಲ್ಲ. ಕಾಲ ಹರಣ ಮಾಡುತ್ತಾ ಆಗಿ ಹೋದ ವಿಚಾರವನ್ನು ಮಾತಾಡಿ ಸಮಯ ವ್ಯರ್ಥ ಮಾಡದಿರಿ.

ಇನ್ನೂ ನಾನು ಇತ್ತೀಚಿನ ದಿನದಲ್ಲಿ ಸಾಮಾನ್ಯವಾಗಿ ನಾವೆಲ್ಲಾ ಕಾಣುವ ವಿಚಾರ ತಮಗೆ ಸಂಬಂಧ ಪಡದ ವಿಚಾರದ ಬಗ್ಗೆ ಇಲ್ಲ ಸಲ್ಲದನ್ನು ಒಂದು ಉತ್ತಮ ಕತೆಗಾರರಂತೆ ಸಿನಿಮಾದ ರೀತಿಯಲ್ಲಿ ಕಥೆಯನ್ನು ಪೋಣಿಸುವುದು. ಒಂದು ಕ್ಷಣವೂ ಯೋಚಿಸುವುದಿಲ್ಲ ನಾವು ಬೇರೆಯವರ ಬದುಕಿನ ಬಗ್ಗೆ ಮಾತಾಡುತ್ತಿರುವುದು ಮುಂದೆ ನಮ್ಮ ಬದುಕಲ್ಲೂ ಈ ರೀತಿಯ ಘಟನೆ ಆಗಬಹುದು ಎನ್ನುವ ಒಂದು ಚೂರು ಪರಿವೆಯಿಲ್ಲದೆ ಮಾತನಾಡುತ್ತಾರೆ. ನಮ್ಮ ಜನರು, ಇಂತಹ ಜನರಿಂದ ದೂರ ಇರಿ. ಪ್ರತಿಯೊಬ್ಬರ ಬದುಕಲ್ಲಿ ಏಳು ಬೀಳುಗಳಿರುತ್ತದೆ. ಅವರವರ ಪುಸ್ತಕದ ಪುಟ ಬೇರೆ ಬೇರೆಯಾಗಿರುತ್ತದೆ.

ಬದುಕಿನ ಕಷ್ಟ, ನೋವು, ಕೆಲಸದ ಹುಡುಕಾಟ, ಮಕ್ಕಳ ಮದುವೆ, ಆಸ್ಪತ್ರೆಯಲ್ಲಿ ರಕ್ತಕ್ಕಾಗಿ, ಹಣಕ್ಕಾಗಿ ಪರದಾಟ, ಮಕ್ಕಳ ಶಿಕ್ಷಣ, ಪ್ರತಿಯೊಬ್ಬರ ಬದುಕಿನ ಕಷ್ಟ ವಿಭಿನ್ನವಾಗಿರುತ್ತದೆ. ಅವರವರಿಗೆ ತಮ್ಮ ಬದುಕು ಒಂದು ಸಿನಿಮಾದ ಹಾಗೇ ಅನಿಸಬಹುದು. ಉತ್ತಮ ಶೀರ್ಷಿಕೆಯೊಂದಿಗೆ ನಮ್ಮ ಪುಸ್ತಕದ ಪುಟದ ಬರಹಗಾರರು ನಾವಾಗಿರಬೇಕು. ಬೇರೆಯವರು ನಮ್ಮ ಜೀವನದ ಬಗ್ಗೆ ಅವರಿಗೆ ತೋಚಿದಂತೆ ಬರೆಯಲು ಅವಕಾಶ ನೀಡಬಾರದು. ಕಷ್ಟ ಎಲ್ಲರಿಗೂ ಬರುತ್ತದೆ ಅಂತಹ ಸವಾಲನ್ನು ಎದುರಿಸಿ ಮುಂದೆ ಸಾಗುವುದೇ ಬದುಕಿಗೆ ನಿಜ ಅರ್ಥ ತಿಳಿಸುತ್ತದೆ.

ಸಣ್ಣ ಸಣ್ಣ ಕಷ್ಟಗಳಿಗೆ ಚಿಂತಿಸುವವರು ಬಡತನದಿಂದ ಬೆಂದವರ ಜೊತೆ ಮಾತಾಡಿ,, ಆಕ್ಸಿಜನ್ ಬೆಲೆ ತಿಳಿಯಲು ಆಸ್ಪತ್ರೆಯ ಐ.ಸಿ.ಯು ನೋಡಿ, ಮನೆಗಾಗಿ, ಆಸ್ತಿಗಾಗಿ ಕಾದಾಡುವವರು ರಸ್ತೆ ಬದಿಯಲ್ಲಿ ಮಲಗಿದ ಜೀವವನ್ನು ನೋಡಿ, ಪ್ರೀತಿಯ ಕೊರತೆಯ ಬಗ್ಗೆ ಮಾತನಾಡುವವರು ಅನಾಥಾಶ್ರಮಕ್ಕೆ ಭೇಟಿ ನೀಡಿ.. ನೀವು ನೆನಸಿದ ಹಾಗೆ ನಿಮ್ಮ ಬದುಕನ್ನು ರೂಪಿಸಲು ಸಾಧ್ಯ ವಿಲ್ಲ. ಆದರೆ ಸಾಧಿಸುವ ಛಲ ಇದ್ದರೆ ಎಲ್ಲವೂ ಸಾಧ್ಯ. ಬದುಕಲ್ಲಿ ತಪ್ಪು ನಡೆದರೆ ಕೊರಗದೆ ನಮ್ಮ ಮುಂದಿನ ಬದುಕಿಗೆ ಮಾರ್ಗ ತಿಳಿದುಕೊಳ್ಳೋಣ. ಖುಷಿ ಘಟನೆ ಆದಲ್ಲಿ ಇನ್ನಷ್ಟು ಒಳಿತಾಗಲು ಪ್ರಯತ್ನಿಸೋಣ. ಕಷ್ಟಬಂದರೆ ಸರಿಪಡಿಸಲು ದಾರಿ ಹುಡುಕುವ ಪ್ರಯತ್ನ ಮಾಡೋಣ. ಇತರರ ಸಾಧನೆಯನ್ನು ಮಾರ್ಗದರ್ಶನದಂತೆ ಸ್ವೀಕರಿಸಿ, ನಿಮ್ಮವರಿಗಾಗಿ, ನಿಮಗಾಗಿ ಬದುಕಿ. ಯಾಕೆಂದರೆ ಇರುವುದು ಒಂದು ಬದುಕು ಒಮ್ಮೆ ಯೋಚಿಸಿ.



**ಬಸವರಾಜ ಎನ್ ಗುಡಿ**
ಬಿ.ಇಡಿ., ಪ್ರಶಿಕ್ಷಣಾರ್ಥಿ

---

## ಅಹಂಕಾರದಿಂದ ಒಳ್ಳೆಯದನ್ನು ಕಳೆದುಕೊಳ್ಳಬೇಡಿ.!

ಅಹಂ ಎಂದರೆ ಜೀವದ ಸ್ವಕೃತ ಧರ್ಮ. 'ಸ್ವಕೃತ' ಎಂಬ ಶಬ್ದವನ್ನು 'ಸ್ವ'ದ ಅರಿವಿನಿಂದ, ಅಂದರೆ ತನ್ನತನದ ಅರಿವಿನಿಂದ ಜೀವವು ಸ್ವೀಕರಿಸಿದ ಕೃತಿಸ್ವರೂಪ ಕರ್ಮ ಎಂಬ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. 'ನಾನು ಹೋದರೆ ಹೋದೇನು' ಎಂದು ಹೇಳಿದ ಕನಕದಾಸರ ಈ ಪ್ರಸಿದ್ಧ ಉಕ್ತಿಯಿಂದ ಮನುಷ್ಯನಲ್ಲಿನ 'ನನ್ನತನ'ದ, ಅಂದರೆ ಅಹಂಭಾವದ ವ್ಯರ್ಥತೆಯು ತಿಳಿಯುತ್ತದೆ. ಅಹಂಭಾವವು ಮನುಷ್ಯನ ಲೌಕಿಕ ಮತ್ತು ಪಾರಮಾರ್ಥಿಕ ಸುಖದಲ್ಲಿನ ಒಂದು ದೊಡ್ಡ ಅಡಚಣೆಯಾಗಿದೆ. ಅಹಂಭಾವದ ಬೀಜವು ಮನುಷ್ಯ ಜನ್ಮದಲ್ಲಿಯೇ ಇರುವುದರಿಂದ ಹಿರಿಯ–ಕಿರಿಯ, ಬಡವ–ಬಲ್ಲಿದ, ಅಶಿಕ್ಷಿತ–ಸುಶಿಕ್ಷಿತ ಇತ್ಯಾದಿ ಎಲ್ಲರಲ್ಲಿಯೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಅಹಂಭಾವವು ಇದ್ದೇ ಇರುತ್ತದೆ.

ಅಹಂಭಾವವು ಹೊಲದಲ್ಲಿ ಬೆಳೆಯುವ ಹುಲ್ಲಿನಂತಿರುತ್ತದೆ. ಮಾನವರಾದ ನಾವು ಎಲ್ಲಿಯವರೆಗೆ ಅಹಂಭಾವ ಎಂಬ ಹುಲ್ಲನ್ನು ನಮ್ಮ ಜೀವನದಲ್ಲಿ ಬೇರುಸಮೇತ ನಾಶಮಾಡುವುದಿಲ್ಲವೋ, ಅಲ್ಲಿಯವರೆಗೆ ಒಳ್ಳೆಯ ಬೆಳೆ ಎಂಬ ವಿಚಾರಗಳು ಬರಲು ಸಾಧ್ಯವಿಲ್ಲ. ಅಹಂಭಾವವು ಸಂಪೂರ್ಣ ನಾಶವಾಗದ ಹೊರತು ಜೀವನದಲ್ಲಿ ಸಾಧನೆಯ ಉನ್ನತಿಯನ್ನು ಪಡೆಯಲು ಅಸಾಧ್ಯ. ಸಾಧನೆಯ ಉದ್ದೇಶವೇ ಅಹಂಭಾವವನ್ನು ನಾಶ ಮಾಡುವುದಾಗಿದೆ; ಆದರೂ, ಮನುಷ್ಯನಲ್ಲಿ ಅಹಂಭಾವವು ಎಷ್ಟು ಬೇರೂರಿರುತ್ತದೆ ಎಂದರೆ ಸಾಧನೆಯನ್ನು ಮಾಡುವಾಗಲೂ ಅದನ್ನು ಸಂಪೂರ್ಣ ನಾಶಮಾಡಲೂ ಸಾಧ್ಯವಾಗುವುದಿಲ್ಲ. ಆದುದರಿಂದ, ಸಾಧನೆಯಿಂದ ಅಹಂಭಾವವು ತಾನಾಗಿಯೇ ಕಡಿಮೆಯಾಗುವುದು ಎಂದು ವಿಚಾರವನ್ನು ಮಾಡದೇ ಅದನ್ನೇ ಮುಂದುವರೆಸಿಕೊಂಡು ತನ್ನ ಅಸ್ತಿತ್ವವನ್ನು ತಾನೇ ನಾಶ ಮಾಡಿಕೊಳ್ಳುವ ದುರಂತಕ್ಕೆ ನಾಂದಿಯಾಗುತ್ತದೆ.

ಆ. ನಾನು, ನನ್ನದು, ನನಗೆ, ಇಂತಹ ಅಭಿಮಾನವನ್ನಿಟ್ಟುಕೊಳ್ಳುವುದು ಎಂದರೆ ಅಹಂ. ನನ್ನ ದೇಹ, ನನ್ನ ಮನಸ್ಸು, ನನ್ನ ಪ್ರಾಣ, ನನ್ನ ಬುದ್ಧಿ, ನನ್ನ ಸಂಪತ್ತು, ನನ್ನ ಹೆಂಡತಿ– ಮಕ್ಕಳು, ನನಗೆ ಸುಖ ಸಿಗಬೇಕು ಎಂಬ ವಿಚಾರಗಳು ಅಹಂನಿಂದಲೇ ನಿರ್ಮಾಣವಾಗುತ್ತವೆ. ವಿಚಾರ ಮಾಡಿದಾಗ 'ನಾನು' ನನ್ನದು, ನನ್ನಿಂದಾಗಿದೆ, ಎಂಬ ಸಂಗತಿಗಳಿಂದ ಮುಕ್ತವಾದರೆ, ನಿಜವಾದ ವಸ್ತುವೇ ಸಿಗಲಾರದು. ಕೊನೆಗೆ ಏನು ಉಳಿಯುತ್ತದೆಯೋ ಅದೇ ಆತ್ಮ–ಚೈತನ್ಯ.

ಅಹಂಭಾವದ ವಿಧಗಳು :

- ಈಶ್ವರನ ಅಹಂ : ಅಹಂಕಾರ ಈ ಶಬ್ದವು ಅಹಂ + ಆಕಾರ ಹೀಗೆ ರೂಪುಗೊಂಡಿದೆ. ಆಕಾರವು  ಹೋಯಿತೆಂದರೆ ಅಹಂ ಮಾತ್ರ ಉಳಿಯುತ್ತದೆ. ಆಗ 'ನೀನು' ಇಲ್ಲದಿರುವಂತಹ 'ನಾನು' ಉಳಿಯುತ್ತದೆ, ಅರ್ಥಾತ್ ಬ್ರಹ್ಮ ಅಥವಾ ಈಶ್ವರ ಮಾತ್ರ

ಉಳಿಯುತ್ತಾನೆ. ಅಹಂರಹಿತ 'ನಾನು' ಎಂದರೆ ಬ್ರಹ್ಮ ಅಥವಾ ಈಶ್ವರ.

- ಮನುಷ್ಯನ ಅಹಂ : ಶುದ್ಧ ಅಹಂ, ಬ್ರಹ್ಮನಿಂದ ತನ್ನನ್ನು ಬೇರೆ ಎಂದು ತಿಳಿಯುವುದು. ಅಂದರೆ ದ್ವೈತದಲ್ಲಿದ್ದು ಸ್ವರೂಪದ ಅರಿವಿರುವುದು. ಅಸ್ತಿತ್ವದ ಅರಿವು ಮಾತ್ರ ಇರುವುದು, 'ನಾನು ಇತರರವನಾಗಿದ್ದೇನೆ ಮತ್ತು ಎಲ್ಲರೂ ನನ್ನವರಾಗಿದ್ದಾರೆ' ಎನ್ನುವ ಭಾವವಿರುವುದು. ದೇಹ ಇರುವವರೆಗೆ ಜಾಗೃತಾವಸ್ಥೆಯಲ್ಲಿ ಶುದ್ಧ ಅಹಂ ಇದ್ದೇ ಇರುತ್ತದೆ.
- ಅಶುದ್ಧ ಅಹಂ : ಅಶುದ್ಧ ಅಹಂ ಎಂದರೆ ದೇಹದಿಂದಾಗಿ ಅಥವಾ ಲಿಂಗದೇಹದಲ್ಲಿನ ಸ್ವಭಾವ, ವಾಸನೆ, ಇಷ್ಟಾನಿಷ್ಟ ಮುಂತಾದ ಸಂಸ್ಕಾರ ಕೇಂದ್ರಗಳಲ್ಲಿನ ಸಂಸ್ಕಾರಗಳಿಂದಾಗಿ ತನ್ನ ಅಸ್ತಿತ್ವದ ಅರಿವಿರುವುದು. ವಿಚಾರಗಳು ಹಾಗೂ ಭಾವನೆಗಳಿಗನುಸಾರವಾಗಿ ಅಹಂಭಾವವು ಸಾತ್ತ್ವಿಕ ರಾಜಸಿಕ ಅಥವಾ ತಾಮಸಿಕವಾಗಿರುತ್ತದೆ. ಅಹಂಭಾವದ ಈ ಮೂರು ವಿಧಗಳನ್ನು 'ಅಹಂತ್ರಯ' ಅಥವಾ 'ತ್ರಿವಿಧ ಅಹಂ' ಎನ್ನುತ್ತಾರೆ.
- ಮನಸ್ಸು, ಚಿತ್ತ, ಬುದ್ಧಿ ಮತ್ತು ಅಹಂ ನಿರ್ಮಾಣವಾಗಿ, ಆ ಉತ್ಪತ್ತಿಯ ಪರಮಾವಧಿ ಆಯಿತೆಂದರೆ ಅಂತಃಕರಣವು ಸಂಪೂರ್ಣವಾಗಿ ಜನ್ಮಕ್ಕೆ ಬಂದಿದೆ ಎಂದು ತಿಳಿಯಬೇಕು. ಐಹಿಕ ಸುಖದ ಎಲ್ಲ ಕ್ರಿಯೆಗಳೂ ಅಹಂನ ಆಧಾರದಿಂದಲೇ ನಡೆಯುತ್ತವೆ. ಕಲಿಯುಗದಲ್ಲಿನ ಬುದ್ಧಿ ಮತ್ತು ಅಹಂ ಇವುಗಳ ಬಗ್ಗೆ ಹೀಗೆ ಹೇಳಬಹುದು "ಬುದ್ಧಿಯ ಪರಿಪೂರ್ಣ ವಿಕಾಸ ಎಂದರೆ ದೇಹಬುದ್ಧಿ. ದೇಹಸುಖ ಪಡೆಯಲು ಬುದ್ಧಿವಂತಿಕೆಯ ಗರಿಷ್ಠ ಮಿತಿ ಎಂದರೆ ಬುದ್ಧಿ! ಅಹಂ ಎಂದರೆ ಬುದ್ಧಿಯ ಪರಿಪೂರ್ಣ ವಿಕಾಸ!"
- ತಾಮಸಿಕ ಅಹಂ : ತಮೋಗುಣ ಪ್ರಧಾನವಾಗಿರುವಂತಹ ಅಹಂಭಾವವನ್ನು 'ಭೂತಾದಿ' ಅಥವಾ 'ತಾಮಸಿಕ ಅಹಂ' ಎನ್ನುತ್ತಾರೆ. ಉದಾ. ಕೇವಲ ಸ್ವಕರ್ತೃತ್ವವನ್ನು ಮಾತ್ರ ಒಪ್ಪಿಕೊಳ್ಳುವುದು.
- ರಾಜಸಿಕ ಅಹಂ : ರಜೋಗುಣದ ಪ್ರಾಬಲ್ಯವಿರುವಂತಹ ಅಹಂಭಾವವನ್ನು 'ತೈಜಸ' ಅಥವಾ 'ರಾಜಸಿಕ ಅಹಂಭಾವ' ಎನ್ನುತ್ತಾರೆ. ಉದಾ. ಸದಾಕಾಲ ಸುಖಕ್ಕಾಗಿ ಚಡಪಡಿಸುವುದು.
- ಸಾತ್ತ್ವಿಕ ಅಹಂ : ಸತ್ತ್ವಗುಣ ಪ್ರಧಾನವಾಗಿರುವಂತಹ ಅಹಂಭಾವವನ್ನು 'ವೈಕೃತ' ಅಥವಾ 'ಸಾತ್ತ್ವಿಕ ಅಹಂ' ಎನ್ನುತ್ತಾರೆ. ಉದಾ. ತ್ಯಾಗದ ಅಹಂ ಸಾತ್ತ್ವಿಕವಾಗಿರುತ್ತದೆ.
- ಜೀವನದಲ್ಲಿ ನಮಗೆ ದೊರಕಿದ ಅನೇಕ ಅವಕಾಶಗಳನ್ನು ಅಹಂಕಾರ, ಅಜ್ಞಾನ ಎಂಬ ಕತ್ತಲಿನಲ್ಲಿ ಕುಳಿತು ಭವಿಷ್ಯದ ಯೋಚನೆಯಿಲ್ಲದೆ, ಯಾಂತ್ರಿಕವಾಗಿ ಕಳೆದು ಬಿಡುತ್ತೇವೆ ಕೊನೆಗೆ ಬುದ್ಧಿಯ ಬೆಳಕು ಮನಸ್ಸಿನಲ್ಲಿ ಹೊಳೆದಾಗ ನಡೆದು ಬಂದ ದಾರಿಯಲ್ಲಿ ಅದೆಷ್ಟು ಅವಕಾಶಗಳನ್ನು ಕಳೆದುಕೊಂಡಿದ್ದೇವೆ ಎಂದು ಅರಿವಾಗುತ್ತದೆ. ಪ್ರತಿಯೊಂದನ್ನು ನಾವು ನಮ್ಮ ಅಂತಸ್ತು, ವಿದ್ಯಾರ್ಹತೆ, ನಮ್ಮ ಬುದ್ಧಿಮಟ್ಟ ಇವುಗಳ ಕಾರಣ ಕೊಟ್ಟು ನಮ್ಮಲ್ಲಿ ಇಂತಹವೇ ಕೆಲಸಬೇಕು ಎಂದು ಕರಾರು ಹಾಕುತ್ತಾ ಹೋಗುತ್ತೇವೆ.

**Conclusion:** Globalization has both challenges and opportunities for the Indian economy. It has brought growth, technology, and access to global markets. Effective policies and strategies can help reduce the adverse effects.

**Jahnavi T.S.**
2nd PU Commerce

# ಚಂದಿರ


ಕನಸಿನ ತೇರಾ ಏರಿ
ಹೊರಡುವ ನಾವು ಸವಾರಿ.
ಅಲ್ಲೊಂದು ಸಾಮ್ರಾಜ್ಯವು,
ಹೆಸರದಕ್ಕೆ ತಿಮಿರ.
ದೊರೆ ಒಬ್ಬನೇ ಇದಕ್ಕೆ,
ನಾಮದೇವೂ ಚಂದಿರ.
ಭೂಮಿಯನ್ನು ತೊಟ್ಟಿಲಲ್ಲಿ,
ಇಳೆ ಎಂಬ ಪ್ರದೇಶದಲ್ಲಿ,
ನಾಚುತಿಯಳು ಚಂಪಕ ಸುವರ್ಣ,
ಹೊಂದಿಹಳು ತೆಳು ಹಳದಿಯ ವರ್ಣ.
ಸವಿ ಸಂಜೆಯ ನೀಲಿಗೇ,
ನಾಚುತ್ತೆ ನೀ ಮೆಲ್ಲಗೆ,
ಹಗುರಾಯಿತು ಈಗ ಮನದಂಗಳವೂ,
ನಿನ್ನ ಸ್ಪರ್ಶದಿಂದ ತಣಿಯಿತು ಮನವು.
ಸಪ್ತಸಾಗರವ ದಾಟಿ
ನೀಲ ಮೇಘ ಮಂಡಲಗಳ ಮೀಟಿ
ಬಂದಿತ್ತು ನಿನ್ನ ಪರಿಮಳದ ಸಂಗಮ
ನಿನ್ನರಸಿ ನಾಚುತ ಬಂದನು ಚಂದ್ರಮ
ಬಾನಿಂದ ಇಳಿದು ಬಂದ
ಕಾರಣವೇ ನಿನ್ನ ಅಂದ
ತಿಳಿಯದು ಚಂದಿರನ ವಿರಸ
ನಿನ್ನಸನಿಹವೇ ಅವನ ಸರಸ
ಮೆಲ್ಲಗೆ ನೀ ಅರಳು
ಎಲ್ಲಿಗೆ ನಿನ್ನ ನೆರಳು
ಏಕೆ ನಾಚುವೆನಿ ಅವನ ಮಾತಿಗೆ
ಸೆಳೆಯಿತು ನಿನ್ನ ಕಳ್ಳ ಕಣ್ ಕಾಡಿಗೆ
ಚಂದಿರನು ಕೆಂಪಾಗಿ ನಾಚುವನು ನಿನ್ನಯ ನೆರಳಿನಲ್ಲಿ
ನಿನ್ನ ಕಣ್ಣಿಗೆ ಚಂದ ಕಾಡಿಗೆ ಸಿಗುವುದೇ ನಿನ್ನ ಪರಿಮಳದ
ಬಾಡಿಗೆ ಚಂದಿರನ ಚಂದದ ನಡಿಗೆಗೆ
ಹೊರಳದೆ ನಿನ್ನ ನಾಲಿಗೆ?

ಸೋತು ನಿಂತಿಹನು ಚಂದಿರ
ಆಧಾರವೇ ನಿನ್ನ ಶೃಂಗಾರ
ನಾ ಜೊತ್ತಿಗೆ ನೀ ಅವನ ಮಾತಿಗೆ
ಸೋತೆನು ನಿನ್ನ ಚೆಲುವಿಗೆ.
ನೀಲಿ ಬಾನಿನ ರಾಜ
ನಿನ್ನ ಚೆಲುವಿಗೆ ಸೋತ
ನನ್ನ ನಿದ್ದೆ ಅಂಗಳದಲ್ಲಿ
ಉತ್ತರಿಸುವೆ ನೀ ನನ್ನ,
ಬಂಧದ ಗೆಜ್ಜೆಯಲ್ಲಿ
ನಿನ್ನೆದೆ ಮೇಲೆ ಮಳೆ ಹನಿಯ ಮುತ್ತು
ನನ್ನೊಳಗೆ ನಿನ್ನ ಸುಗಂಧದ ಮದ್ದು.
ನಿನ್ನೆದೆ ಮೇಲೆ ಮಳೆ ಹನಿ
ಕರಗಿಸಿದ ನೀ ನನ್ನ ಕಂಬನಿ.
ನಿನ್ನ ನೋಟಕ್ಕೆ ಸೋತು
ಆಡುತ್ತಿರುವ ಏನು ಮಾತು!
ನಿನ್ನ ಹೆಸರು ಚಂಪ
ಮನದಂಗಳಿಗೆ ನೀಡುವ ತಂಪ
ನಿನ್ನ ಉದ್ದನೆಯ ತಿಳು ಹಸ್ತ
ಸೆಳೆಯಿತು ನನ್ನೀಚಿತ್ತ
ನಿನ್ನ ನೋಟವ ಕಂಡು ಚಂದ್ರನು ನೀರಾಗಿ ಕರಗಿದ
ನಿನ್ನ ಪರಿಮಳದಿಂದ ಹಸಿರಾಯ್ತು ಮರ ಗಿಡ,
ಆಯ್ತು ನಿನ್ನ ಚಂದದ ತೆರಿಗೆ
ನೀನೇ ಚಂದ ನಿನ್ನವನಿಗೆ, ಶಶಿಗೆ
ಜೊತೆಯಲ್ಲಿ ಎಲೆಯಿಂದ ಭೂಮಿಗೆ ಜಾರಿ
ಚಂದ್ರನು ಹಾಡುವನು ನಿನಗೆ ಸುವ್ವಿ ಸುವ್ವಾಲಿ



ಶ್ರೇಯಾ ಶಿರಸಂಗಿ
ಪ್ರಥಮ ಪಿಯುಸಿ, ವಿಜ್ಞಾನ ವಿಭಾಗ

# ವಿದ್ಯಾರ್ಥಿ ಜೀವನದಲ್ಲಿ ಶಿಸ್ತಿನ ಮಹತ್ವ



ವಿದ್ಯಾರ್ಥಿ ಜೀವನದಲ್ಲಿ ಶಿಸ್ತಿನ ಮಹತ್ವ ಬಹಳ ದೊಡ್ಡದು ನಮ್ಮ ಜೀವನದಲ್ಲಿ ಶಿಸ್ತು ಬಹಳ ಮುಖ್ಯ ಇದು ಜೀವನದಲ್ಲಿ ಕ್ರಮಬದ್ಧತೆಯನ್ನು ಸೂಚಿಸುತ್ತದೆ ಇದು ಒಬ್ಬರ ಜೀವನದಲ್ಲಿ ಯಶಸ್ವಿಗೆ ಅವಶ್ಯಕವಾಗಿದೆ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ವಿಭಿನ್ನ ರೂಪದಲ್ಲಿ ಶಿಸ್ತನ್ನು ಅನುಸರಿಸಿರುತ್ತಾರೆ. ಶಿಸ್ತು ನಮ್ಮನ್ನು ಪ್ರಾಮಾಣಿಕತೆ, ಕಠಿಣ ಪರಿಶ್ರಮ, ತಾಳ್ಮೆ ಮಹತ್ವಾಕಾಂಕ್ಷೆ, ಸ್ವತಂತ್ರ ಮತ್ತು ಸಮಯ ಪ್ರಜ್ಞೆಯನ್ನು ಮಾಡುತ್ತದೆ. ಶಿಸ್ತು ಇಲ್ಲದ ಜೀವನ ರೆಡಾರ್ ಇಲ್ಲದ ಹಡಗಿನಂತೆ ಜೀವನದ ಪ್ರಮುಖ ಸಮಯ ವಿದ್ಯಾರ್ಥಿ ಜೀವನವು ವ್ಯಕ್ತಿಯ ಸಂಪೂರ್ಣ ಜೀವನಕ್ಕೆ ಆಧಾರವಾಗಿದೆ ವ್ಯಕ್ತಿ ಭವಿಷ್ಯವು ಜೀವನದ ಈ ಅವಧಿಯನ್ನು ಅವಲಂಬಿಸಿರುತ್ತದೆ. ಈ ಅಡಿಪಾಯ ದುರ್ಬಲವಾಗಿದ್ದರೆ ಭವಿಷ್ಯ ತೊಂದರೆಗಳಿಂದ ತುಂಬಿರುತ್ತದೆ, ವೈಫಲ್ಯವನ್ನು ಸಹ ಎದುರಿಸಬಹುದು ಇದಕ್ಕೆಲ್ಲ ಶಿಸ್ತು ಬಹಳ ಮುಖ್ಯ.

ವಿದ್ಯಾರ್ಥಿ ಜೀವನದ ಯಶಸ್ವಿಗೆ ಶಿಸ್ತು ಮುಖ್ಯ.. ಶಿಸ್ತು ಮಾತ್ರ ವಿದ್ಯಾರ್ಥಿಯನ್ನು ಏಕಾಗ್ರತೆ, ಸ್ವತಂತ್ರ, ಸಮಯ ಪ್ರಜ್ಞೆ ಮತ್ತು ಜೀವನದಲ್ಲಿ ಮಹತ್ವಾಕಾಂಕ್ಷೆಯನ್ನಾಗಿ ಮಾಡುತ್ತದೆ ಇತರರನ್ನು ಗೌರವಿಸುವುದು ಮತ್ತು ವಿಧೇಯರಾಗಿರುವುದು ಶಿಸ್ತಿನ ತತ್ವವಾಗಿದೆ. ಶಿಸ್ತು ವಿದ್ಯಾರ್ಥಿಗೆ ಒತ್ತಡ ಮುಕ್ತ ಜೀವನವನ್ನು ನೀಡುತ್ತದೆ, ಅದೇ ಸಮಯದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ, ವಿದ್ಯಾರ್ಥಿಗಳು ದೇಶದ ಭವಿಷ್ಯದ ಆಸ್ತಿ ಎಂಬುದು ನಮಗೆಲ್ಲರಿಗೂ ತಿಳಿದಿದೆ. ವಿದ್ಯಾರ್ಥಿ ಜೀವನವು ಇಡೀ ಜೀವನದ ಇಡೀ ಅಡಿಪಾಯವನ್ನು ರೂಪಿಸುತ್ತದೆ. ಆದ್ದರಿಂದ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬಹಳ ಮುಖ್ಯ... ಶಿಸ್ತಿನ ವಿದ್ಯಾರ್ಥಿ ಜೀವನದಲ್ಲಿ ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಿರುತ್ತಾನೆ. ಶಿಸ್ತು ಯಾವಾಗಲೂ ವಿದ್ಯಾರ್ಥಿ ಗುರಿಗಳ ಮೇಲೆ ಕೇಂದ್ರೀಕರಿಸಲು ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಶಿಸ್ತಿನ ವಿದ್ಯಾರ್ಥಿ ತನ್ನ ಗುರಿಯಿಂದ ಎಂದೆಂದಿಗೂ ವಿಚಲನೆಗೊಳ್ಳುವುದಿಲ್ಲ ಮತ್ತು ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಿರುತ್ತಾರೆ.

ರಾಷ್ಟ್ರದ ನಿರ್ಮಾಣದಲ್ಲಿ ಶಿಸ್ತು ಪ್ರಮುಖ ಪಾತ್ರ ವಹಿಸುತ್ತದೆ. ಮತ್ತು ಸಮಾಜದಲ್ಲಿ ದೈಹಿಕ ಮತ್ತು ನೈತಿಕ ಕಾನೂನುಗಳಿಗೆ ಗೌರವವನ್ನು ತೋರಿಸುವುದು ಶಿಸ್ತಿನ ಮೂಲಕ ಮಾತ್ರ ಸಂಭವಿಸುತ್ತದೆ. ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು.



**ಅನನ್ಯ**
ಪ್ರಥಮ ಪಿಯುಸಿ ವಾಣಿಜ್ಯ ವಿಭಾಗ

# ಅಮ್ಮ

ನಿನ್ನ ಸಾಧನೆಯ ಹಿಂದೆ ಎಲ್ಲರು ನಿಲ್ತಾರೆ ಆದರೆ ನಿನ್ನ ಸೋಲಿನ
ಹಿಂದೆಯೂ ನಿಲ್ಲುವವರು ನಿನ್ನ ಹೆತ್ತವರು ಮಾತ್ರ.
ನನಗೆ ಜನ್ಮ ಕೊಟ್ಟ ಜನ್ಮದಾತೆ ನನ್ನ ಅಮ್ಮ
ಮಾತು ಕಲಿಸಿ ಮುತ್ತು ಕೊಟ್ಟ ಮುದ್ದು ನನ್ನ ಅಮ್ಮ
ನನ್ನ ಕಣ್ಣೊರೆಸಿ ಕನ್ನಡ ಹೇಳಿಕೊಟ್ಟ ಸರಸ್ವತಿ ನನ್ನ ಅಮ್ಮ
ವಿದ್ಯೆ ವಿನಯತೆ ಕೊಟ್ಟ ಗುರು ನನ್ನ ಅಮ್ಮ
ತಾನು ನಡೆದು ನನ್ನನ್ನು ಗುರಿತಲುಪಿಸಿದ ಮರ್ಗದರ್ಶಿ ನನ್ನ ಅಮ್ಮ
ತಾನು ಹಸಿದು ನನ್ನ ಹೊಟ್ಟೆ ತುಂಬಸಿದ ಅನ್ನಪೂರ್ಣೆ ನನ್ನ ಅಮ್ಮ
ತಂದೆಯಾಗಿ ಸ್ನೇಹಿತೆಯಾಗಿ ನಿಂತ ಜನ್ಮದಾತೆ ನನ್ನ ಅಮ್ಮ
ಸೋಲದಿರು ಗೆಲ್ಲುವ ಪ್ರಯತ್ನ ಬಿಡದಿರು
ಎಂದು ಜೀವನಪಾಠ ಹೇಳಕೊಟ್ಟವಳು ನನ್ನ ಅಮ್ಮ






**ವರ್ಷಿತಾ ಎಸ್.**
ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗ

# ಗ್ರಂಥಾಲಯಗಳ ಮಹತ್ವ

"ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದಂತೆ "ಎಂಬ ನಾಣ್ನುಡಿಯಂತೆ ಎಲ್ಲರೂ ಗ್ರಂಥಗಳನ್ನು ಹೊಂದಿ ತಮ್ಮತಮ್ಮಲ್ಲಿ ಆತ್ಮಗಳನ್ನು ಇಟ್ಟುಕೊಳ್ಳಬೇಕಾಗಿದೆ. ಗ್ರಂಥಾಲಯಗಳು ಅಜ್ಞಾನದ ಹಾದಿಯಲ್ಲಿರುವವರನ್ನು ಜ್ಞಾನ ಎಂದರೆ ಬೆಳಕಿನ ಕಡೆ ಕರೆತರುವ ವಸ್ತುವಾಗಿದೆ. ಗ್ರಂಥಾಲಯಗಳು ಒಬ್ಬರ ವ್ಯಕ್ತಿತ್ವ ವಿಕಸನ ಮಾಡುವಲ್ಲಿ ಪ್ರಮುಖ ಪಾತ್ರವನ್ನು ಹೊಂದಿವೆ. ಗ್ರಂಥಾಲಯವೇ, ಜ್ಞಾನಾರ್ಜನೇಯ ಮಾರ್ಗವನ್ನು ತೋರುತ್ತವೆ. ಗ್ರಂಥಗಳನ್ನು ಹೊಂದಿರುವ ಆಲಯವೇ ಗ್ರಂಥಾಲಯ



ಎನ್ನುವರು. ಆದ್ದರಿಂದಲೇ ಶಾಲಾ– ಕಾಲೇಜಿನಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗ್ರಂಥಾಲಯಗಳನ್ನು ತೆರೆದಿದ್ದಾರೆ. ಮನುಷ್ಯನ ಜೀವನದಲ್ಲಿ ಗಾಳಿ, ನೀರು, ಆಹಾರ, ಆಲಯ ಎಲ್ಲ ಪ್ರಮುಖ ಪಾತ್ರವನ್ನು ವಹಿಸಿಕೊಳ್ಳುತ್ತವೆ. ಗಾಳಿ. ಆಹಾರ ಹಾಗೂ ನೀರು ಅವನ ಜೀವನ ನಡೆಸಲು ಅವಶ್ಯಕತೆಯಾದರೆ, ಪುಸ್ತಕಗಳು ಅವನ ಸ್ನೇಹಿತರಾಗಿ ಎಂದೆಂದಿಗೂ ಅವರ ಜೊತೆಯಾಗಿದ್ದು ಸದಾ ಒಬ್ಬ ವ್ಯಕ್ತಿಯನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಲು ಸದಾ ಸಿದ್ಧರಾಗಿರುತ್ತವೆ. ಒಬ್ಬ ವ್ಯಕ್ತಿಯ ಭಾವನೆಗಳನ್ನು ಅರಿಯಲು ಹಾಗೂ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಪುಸ್ತಕಗಳು ಮುಂದೆ ಇರುತ್ತವೆ. ಮಾನವನ ವ್ಯಕ್ತಿತ್ವ ವಿಕಸನಕ್ಕೆ ಗ್ರಂಥಾಲಯದಲ್ಲಿನ ಅನುಭವಿಗಳ ಅನುಭವಗಳನ್ನು ಹೊಂದಿರುವ ಪುಸ್ತಕಗಳನ್ನು ನೋಡಬಹುದು ಮತ್ತು ಜ್ಞಾನಾರ್ಜನೆಗೆ ಸಹಾಯಮಾಡುತ್ತವೆ. ವ್ಯಕ್ತಿಗಳ ಜೊತೆ ಸದಾ ಇರುವುದು ಅಂದರೆ ಕೊನೆ ತನಕ ಜೊತೆಯಾಗಿ ಇರುವುದು ಎಂದರೆ ಜ್ಞಾನ. ಅದನ್ನು ನೀಡುವುದು ಈ ಗ್ರಂಥಗಳು. ಗ್ರಂಥಾಲಯಗಳಲ್ಲಿ ಕವಿತೆಗಳ ಪುಸ್ತಕ, ಸಾಹಿತ್ಯ, ಸಂಗೀತ ಪುಟಾಣಿಗಳ ಕತೆಗಳು, ಕಾದಂಬರಿಗಳು, ಕವನಸಂಕಲನಗಳು ಕಥಾಸಂಕಲನಗಳು ಹಾಗೂ ಆತ್ಮಕವನಗಳು, ಚುಟುಕುಗಳ ಪುಸ್ತಕ, ಪಠ್ಯಗಳ ಸಂಬಂಧಿತ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತದೆ. ಕನ್ನಡ, ಇಂಗ್ಲೀಷ್ , ಹಿಂದಿ ಇನ್ನು ಮುಂತಾದ ಭಾಷೆಗಳ ಪುಸ್ತಕಗಳನ್ನು ನಾವು ಇಲ್ಲಿ ಗಮನಿಸಬಹುದು ಮತ್ತು ಓದಬಹುದು, ಸಾವಿರಾರು ಪುಸ್ತಕಗಳನ್ನು ನಾವು ಗ್ರಂಥಾಲಯಗಳಲ್ಲಿ ನೋಡಬಹುದು, ಕುವೆಂಪು, ದ.ರಾ.ಬೇಂದ್ರೆ, ಹಾ.ಮ ನಾಯಕ, ರನ್ನ, ಪಂಪ ಇಂತವರ ಸಂಗ್ರಹದ ಪುಸ್ತಕಗಳನ್ನು ಕಾಣಬಹುದು. ಜೊತೆಗೆ ಪುಸ್ತಕ ಹಾಗೂ ಗ್ರಂಥಾಲಯಗಳು ಜ್ಞಾನಾರ್ಜನೆಯ ಮೆಟ್ಟಿಲುಗಳು ನಾವು ಆ ಮೆಟ್ಟಿಲುಗಳನ್ನು ಹತ್ತಿ, ಉನ್ನತ ಮಟ್ಟವನ್ನು ಸೇರಬೇಕು. ಪುಸ್ತಕಗಳು ಜ್ಞಾನ ಭಂಡಾರಗಳು. ಆದ್ದರಿಂದ ಎಲ್ಲರೂ ಈ ಅಕ್ಷರ ದಾಸೋಹವನ್ನು ಸವಿಯಲಿ ಎಂದು ಶಾಲಾ– ಕಾಲೇಜು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗ್ರಂಥಾಲಯಗಳು ಪ್ರಾರಂಭವಾಗಿದೆ. ಆದರೆ ಈಗ 'ಈ – ಲೈಬ್ರರಿ' ಬಂದ ಕಾರಣ ಎಲ್ಲ ಪುಸ್ತಕಗಳು ಮೊಬೈಲ್ಗಳಲ್ಲಿಯೇ ಸಿಗುತ್ತವೆ. ಆದರೆ ಈಗಿನವರು ಪುಸ್ತಕವನ್ನು ಓದುವ ಹವ್ಯಾಸವನ್ನು ಮರೆತುಬಿಟ್ಟಿದ್ದಾರೆ ಜೊತೆಗೆ ಊರಿನ ಗ್ರಂಥಾಲಯಗಳಲ್ಲಿ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ. ಹೆಮ್ಮೆಯ ಸಂಗತಿ ಏನೆಂದರೆ ಗ್ರಂಥಾಲಯಗಳು ನಮ್ಮ ಪುರಾಣ, ಇತಿಹಾಸ ಹಾಗು ಕಾದಂಬರಿಗಳನ್ನು ಇಂದಿಗೂ ಕಾಯುತ್ತಿವೆ ಮತ್ತು ಕಾಪಾಡುತ್ತಿವೆ, ಉದಾಹರಣೆ ವಿದೇಶದ ಒಂದು ಗ್ರಂಥಾಲಯದಲ್ಲಿ ಇಂದಿಗೂ ಕನ್ನಡ ಪುಸ್ತಕಗಳನ್ನು ಹೊಂದಿವೆ. ಓದುವುದು ಒಂದು ಒಳ್ಳೆಯ ಅಭ್ಯಾಸ. ತರತರಹದ ವಿಷಯಗಳನ್ನು ತಿಳಿಯಲು ತರತರಹದ ಪುಸ್ತಕ ದೊರೆಯುತ್ತವೆ. "ಗ್ರಂಥ ಭಂಡಾರವಿಲ್ಲದ ಶಾಲಾ– ಕಾಲೇಜುಗಳು ದೇವರಿಲ್ಲದ ಗುಡಿಯಂತೆ"



ತನುಜಾ.ಡಿ.ಎಸ್.
ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗ

# ನೆನಪು

ಪ್ರತಿ ದಿನ ನನಗೆ ಮಲಗುವಾಗ ಅನಿಸುತ್ತೆ ಯಾಕೋ ನಾನು ಹೀಗೆ ಬರೀ ನಿಂದೆ ಯೋಚನೆ ಮಾಡುತಿನಿ, ಅಂತ ಆಗ ನನ್ನ ಮನಸ್ಸು ಹೇಳಿತು ನಿನ್ನ ನೆನಪು ಎಂದಿಗೂ ಮರೆಯಲಾಗದ ಅಂತ. ಹೇಳಿಕೊಳ್ಳಲಾಗದ ನನ್ನ ಮಾತುಗಳು ಕಣ್ಣೀರಿನ ರೂಪ ತಾಳಿದಾಗ ಅದು ನಾನು ಯಾರ ಜೊತೆ ಇದ್ದರೂ, ನನಗೆ ಒಂಟಿತನ ಕಾಡಿದಾಗ ನೀನು ತುಂಬಾ ನೆನಪಾಗುತ್ತೀಯಾ ಗೊತ್ತಾ.

ವ್ಯಕ್ತಿತ್ವ : ವ್ಯಕ್ತಿಯನ್ನು ನೋಡಿ ಮಾಡುವ ಗೆಳೆತನಕ್ಕಿಂತ ವ್ಯಕ್ತಿತ್ವವನ್ನು ನೋಡಿ ಮಾಡುವ ಗೆಳೆತನ ಶಾಶ್ವತ ಹಾಗೆ ವ್ಯಕ್ತಿಯನ್ನು ನೋಡಿ ಮಾಡುವ ಪ್ರೀತಿಗಿಂತ ವ್ಯಕ್ತಿತ್ವ ಮತ್ತು ಮನಸ್ಸು ನೋಡಿ ಮಾಡುವ ಪ್ರೀತಿ ಎಂದಿಗೂ ಕೂಡ ಅಜರಾಮರ.



ಗೆಳೆತನ : ನಮ್ಮ ನೋವಿನಲ್ಲಿ ಜೊತೆ ಇರೋ ಸಂಬಂಧಗಳು ಸಿಗೋದು ತುಂಬಾ ಅಪರೂಪ, ಅಂತ ಅಪರೂಪ ಸಂಬಂಧವೇ ನನ್ನ ನಿನ್ನ ಈ ಗೆಳೆತನ.

ನಂಬಿಕೆ : ಯಾರನ್ನೇ ಆದರೂ ಪರೀಕ್ಷಿಸದೆ ಯಾವತ್ತೂ ಕೂಡ ನಂಬಬಾರದು ನಂಬಿದ ಮೇಲೆ ಯಾವತ್ತು ಕೂಡ ಪರೀಕ್ಷಿಸಬಾರದು.

**ಚೇತನ್ ಕುಮಾರ್ ಎಂ.ಕೆ.**
ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗ

# ಅಪ್ಪ




ಪ್ರತಿ ಅನ್ನದ ಅಗುಳಲ್ಲಿರುವಳು " ಅಮ್ಮ"
ಅದೇ ಅನ್ನದ ಹಿಂದಿರುವ ಪರಿಶ್ರಮದ ಬೆವರ
ಹನಿಯೇ ಅಪ್ಪ
ನನ್ನಪ್ಪ ಗುರು ಅಲ್ಲ ಆದ್ರೆ ಜವಾಬ್ದಾರಿಯಿಂದ
ಬದುಕಲು ಕಲಿಸಿದ ಮಹಾನ್ ವ್ಯಕ್ತಿ
ನನ್ನಪ್ಪ ದೇವರಲ್ಲ ಆದ್ರೆ ಇಷ್ಟಪಟ್ಟಿರುವದೆಲ್ಲ
ಇಲ್ಲ ಅನ್ನದೆ ಕೊಟ್ಟಿರುವ ಮಹಾನ್ ವ್ಯಕ್ತಿ,
ನನ್ನಪ್ಪ ಶ್ರೀಮಂತನಲ್ಲ ಆದ್ರೆ ಶ್ರೀಮಂತಿಕೆಯಿಂದ
ಜೀವಿಸಲು ಶ್ರೀಮಂತ ಗುಣಗಳನ್ನು ತಿಳಿಸಿಕೊಟ್ಟ ಮಹಾನ್ ವ್ಯಕ್ತಿ
ನನ್ನಪ್ಪ ಸಮಯವಲ್ಲ ಆದ್ರೆ ಸಮಯಕ್ಕೆ ತಕ್ಕ
ಹಾಗೆ ಸಂಬಂಧಗಳು ಬದಲಾದಾಗ ಧೈರ್ಯ ಹಾಗೂ
ಸ್ವಾಭಿಮಾನದಿಂದ ಬದುಕಲು ಕಲಿಸಿ ಕೊಟ್ಟ ಮಹಾನ್ ವ್ಯಕ್ತಿ.
ನನ್ನಪ್ಪನ ಹೆಗಲ ಮೇಲೆ ಕುಳಿತು ದೇವರನ್ನು ಹುಡುಕುತ್ತಿದ್ದೆ
ಆಗ ಗೊತ್ತೇ ಆಗಲಿಲ್ಲ ನಾನು ಕುಳಿತಿರುವುದು ದೇವರ ಮೇಲೆ ಅಂತ



**ತೇಜಸ್ವಿನಿ ಎಸ್.**
ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗ

# ರೈತ



ಮಳೆಯಲ್ಲಿ ನೆನೆಯುತ್ತ
ಬಿಸಿಲಲ್ಲಿ ಬೆವರುತ್ತ
ಚಳಿಯಲ್ಲಿ ನಡುಗುತ್ತ
ಕಷ್ಟದಲ್ಲೂ ಬೆಳೆ ಬೆಳೆಯುತ್ತ
ನಷ್ಟದಲ್ಲೂ ಛಲ ಬಿಡದೆ
ಎಲ್ಲರ ಹೊಟ್ಟೆಗೂ ಅನ್ನ ನೀಡಿ
ದೇಶದ ಬೆನ್ನೆಲುಬಾಗಿರುವ
ರೈತನಿಗೆ ನನ್ನ ಕೋಟಿ ನಮನ



**ಮೇಘ ಕೆ.ಎಸ್.**
ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗ

# Kumadvathi Residential Central School

Shikaripura



KRCS 10th Students 2023-24 Batch



Teaching and Non Teaching staff of KRCS




Sapling to create awareness on the eve of World Environment Day



A Mango keeps all the bad moments away - National Mango Day Celebration



Our Little Soldiers on Kargil Vijay Diwas



Fun Games at Agadi Thota




Fruits Day Celebration



Salute to the Freedom Fighters at Essur




NCC Activity



Krishna Janmashtami Celebration



"The Bond of Protection"- Raksha Bandhan Celebration



Visit to Post Office – our children getting information about the roles and responsibilities of the post master and post man



Field trip to "Fire Station"




Student Council Election



Visit to Places of Worship




Parent Teacher Meet



Kannada Rajyotsava Celebration

## RAINBOW WEEK CELEBRATION (VIBGYOR)




















# INTERNET

It is now easier than ever to access the internet, whether you are using a computer, phone or tablet. There is no doubt that many people are spending more and more time online, with both negative and positive consequences.

One advantage of the internet is that people can do research for their schoolwork and homework. This often helps teenagers to widen their knowledge and improve their grades. Another positive aspect of the internet is that people can practice foreign practices or languages by chatting with friends in other countries. This is also a good way to keep in touch with friends and family around the world.

On the other hand there are also negative consequences. Some young people get addicted to online gaming and this can mean that they waste too much time by playing these games. This can have a negative effect on their school works, the amount of exercise they get and their social lives. In addition, excessive internet use can mean that some young people hardly talk to their families because they are always on the computer.



To sum up, spending time on internet can have a negative impact on people, but it also has many advantages. The internet is an incredible tool and the benefits of internet access outweigh the dangers. However we should be careful and do not use the internet excessively.

**Sadhvi .S**
7th A

---

# PATIENCE

Patience is very precious in journey of life. In our life problems, anger, sadness are like stones on our way. We have to face these stones and we should not lose our patience at any situation. If we are unable to control our anger, then we are responsible for our misery. Patience is very important in the way of success. We should have patience to achieve our goal in life, we have to wait to get peaceful mind and happiness in our life. Patience means not only waiting, it is the ability to accept the trouble calmly. It will show the better side of a person, it will characterize the person. Every one may not have that ability of being patient, people who have patience they are more precious than a diamond. Because “patience is more precious than the diamond.”



**Pavani P. Patil**
9th B

---

# IMPORTANCE OF KINDNESS



One thing I like to believe that everyone should be kind. Because not that you have and eyes on you, or being nice to get what you actually wanted? Believe that kindness comes from within, and it's done even no one are looking at you and helping someone when you don't need to, but it's the right time!



Sometimes in this world getting a true kind person is not easy but also if you are kind to someone that may help a person. A person can get to know about the real one in you. Believe me that no matter how big or small positive impact is better than the negative one

**Priyanka S. Basur**
8th B



# The Greatest Motivator of the world Swamy Vivekananda

Narendranatha Datta, the childhood name of Vivekananda. He was born to Vishwanath Datta and Bhuvaneshwari Devi in Calcutta on Monday, 12 January 1863. The Datta family was rich, respectable, and renowned for charity. Narendranath's Grandfather, Durgacharan Datta was well versed in Persian and Sanskrit and was skilled in Law. But after the birth of his son Vishwanath, he renounced the world and became a monk. He was then only 25 years of age.

His father Vishwanath Datta was an a Horney- at- law in the Calcutta High court. As a youth, Narendranath's leonine beauty was matched by his great courage. He distinguished himself in athletics, philosophy and music and among his colleagues was the undisputed leader.



Swami Vivekananda travelled to America via China, Japan and Canada and reached Chicago about the middle of July 1893. At canton he saw some Buddhist monasteries, in Japan he noted with admiration the industrial progress and cleanliness of the people.

**Yashaswini R.N.**
8th A

---




The Salt March, also known as the Salt Satyagraha Dandi March and the Dandi Satyagraha, was an act of nonviolent civil disobedience in colonial India, led by Mahatma Gandhi. The twenty – four days of March lasted from 12th of March to 5th of April 1930 as a direct action. Campaign of tax resistance and nonviolent protest against the British Salt monopoly. Another reason for this March was that the Civil Disobedience Movement needed a strong inauguration that would inspire more people to follow Gandhi started this March with 78 of his trusted volunteers. The March spanned 387 kilo meters Sabarmati ashram to Dandi. When Gandhi broke the British Raj salt at 8:30 am on 6 April 1930, its sparked large scaled act of civil disobedience against the salt laws by millions of Indians.



**Kanishka R.H**
5th B

---

## TEARS ARE GOOD

What flows is alive. Crying is like a thundershower for the soul. The air feels so wonderful after the rain. Don't be harsh or demanding on yourself. Just experience your feeling and know that your tears are announcing change in your life. Change is coming: Like a summer Rain – to wash away your pain.

Have faith that things are getting Better.





**Nimisha M.**
8th A




- Time is the one thing that cannot be taken back until it has gone.
- Time is only wasted, and we need to think twice before we waste it.
- We all know that once the time is passed, it can never be taken back, but people still waste it.
- We sometimes get involved in pointless activities but neglect our essential tasks.
- People are still in the habit of finishing their assignments at the last moments, which is a bad habit.
- If people have less time, they seek to complete activities that readily sacrifice performance.
- Productive people often respect the time and display a sense of punctuality in their existences.
- We must prioritize our tasks and finish the most critical job first, then move to the next one.



**Harsha N.S.**
9th A

## DADDY

You have loved me and held my hand
Since my birth
There is no better daddy in all the earth.
I will watch you as you guide me
Though life.
With you. I will be able to handle strife.
You are my hero, that's the trust
I will look to you throughout my youth.
My handprint and handmade art
Is for you to know.
You are always in my heart.
MY HERO IN MY LIFE IS MY DADDY.



## FOOLISHNESS

Two Zombies became alive
They started a war with two sharp swords
A deaf policeman heard the voice
Seeing this a dumb man shouted
If you don't believe this true
Then ask the blind man who saw it too.



**Shreeraksha**
7th A

# OUR DAY - CHILDREN'S DAY

On 14th of November 2023, our school celebrated children's day.

This year children's day was marked with excitement and campus was buzzed with enthusiasm. This year celebration was special because we invited children from Basavashrama to join us. As they say "Orphan's spirit cannot be caged for its boundless joy filled with hope of brighter tomorrow". We showed them all around our campus like Atal Tinkering Lab, Playground etc. They were fascinated by all facilities of our school.

Our teachers gave us wonderful program and many children's from Basvashrama sang song and danced etc. They really filled joy in the atmosphere. At last we gave them books and stationery item to motivated them to work harder. It was an innovative idea by our principal Sharvani ma'am and wonderful to have them joining us in the celebration of children's day.



Children of Basavashrama made it extra special on the day of Children's Day celebration of our school.

**Prerana A.P.**
9th A

# FIELD TRIP TO KMF AND AIRPORT

We the students of grade 10 were quite busy preparing for the board exam and in attending all the subject classes since the beginning of this academic year 2023-24.We were literally in need of mind relaxation. This field trip made it possible and gave that relaxation mentally to all of us.

We left our school campus at 10am and reached KMF around 11:30am. The faculties of KMF welcomed and served us hot fresh milk. It was so fascinating to see and to know about the production, manufacturing and packaging of Nandini milk and milk products. Around 1 pm we all had lunch together along with our lovely teachers in the garden area.



We had our visit to Shivamogga Airport around 2pm. luckily as soon as we reached a flight from Bengaluru landed in Shivamogga airport. Faculties and the Manager gave us some information about the airlines. Indeed it was a great day. We enjoyed singing, cracking some jokes in the school bus while travelling.

The day was totally refreshing to me as well as to my classmates.

**Vismayi M.U.**
10th

# GRANDPA



Peaceful words of wisdom
To lead and direct
Large hands holding small ones
To guide us and protect.

Kind words of comfort
And love that shines bright
Warm golden memories
That shines like a light

Watching and caring
Right from the start
My Grandpa's love
Comes deep from his heart
And you are my best one.



**Sudeeksha**
9th B



# ತಂದೆ ತಾಯಿಯ ಪ್ರೀತಿ

ಮಕ್ಕಳ ಬೆಳವಣಿಗೆಯಲ್ಲಿ ತಂದೆ ತಾಯಿ ತೋರುವ ಪ್ರೀತಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅವರ ಪ್ರೀತಿ ವಾತ್ಯಲ್ಯವಿಲ್ಲದೆ ನಮ್ಮ ಜೀವನವನ್ನು ಊಹಿಸಲೂ ಆಗದು ಅವರು ಮಕ್ಕಳನ್ನು ಬೆಳೆಸಿರುವ ರೀತಿ ಅವರಿಗೆ ನೀಡಿದ ಪ್ರೀತಿ ಅವರ ಮಕ್ಕಳ ನಡವಳಿಕೆಯಲ್ಲಿ ತಿಳಿಯುತ್ತದೆ. ತಂದೆ–ತಾಯಿಯ ಪ್ರೀತಿಯಿಂದ ಬೆಂಬಲದಿಂದ ಹಲವಾರು ಜನ ತಮ್ಮ ಗುರಿ ತಲುಪಿದ್ದಾರೆ. ಹಾಗೆಯೇ ಅವರ ಕುರುಡು ವಾತ್ಸಲ್ಯದಿಂದ ತಪ್ಪು ದಾರಿ ಹಿಡಿದು ಜೀವನವನ್ನು ವ್ಯರ್ಥಮಾಡಿಕೊಂಡ ಉದಾಹರಣೆಯು ಇದೆ. ಅವರು ತೋರುವ ಪ್ರೀತಿ ಮಕ್ಕಳ ಏಳಿಗೆಗೆ ಕಾರಣವಾಗಬೇಕೆ ಹೊರತು ಅವರ ಜೀವನ ಹಾಳಾಗುವಂತಿರಬಾರದು. ಮಹಾಭಾರತದಲ್ಲಿ ಧೃತರಾಷ್ಟ್ರನು ತನ್ನ ಮಕ್ಕಳ ಮೇಲೆ ತೋರಿಸುತ್ತಿದ್ದ ಅತಿಯಾದ ಪ್ರೀತಿ ಅವರಲ್ಲಿ ಅಹಂಕಾರವನ್ನು ಮೂಡಿಸಿತು ಅದು ಮುಂದೆ ಆ ವಂಶದ ವಿನಾಶಕ್ಕೂ ಕಾರಣವಾಯಿತು. ಆತನ ಕುರುಡು ಪ್ರೀತಿಯಿಂದ ಮಕ್ಕಳು ವೈರಾಗ್ಯವನ್ನು ಅನುಭವಿಸುವಂತಾಯಿತು ಯಾವ ತಂದೆ– ತಾಯಿಯು ತಮ್ಮ ಮಕ್ಕಳಿಗೆ ಕೆಟ್ಟದ್ದನ್ನು ಬಯಸುವುದಿಲ್ಲ ಆದರೆ ಅವರಿಗೆ ಮಕ್ಕಳ ಮೇಲಿರುವ ಅತಿಯಾದ ವ್ಯಾಮೋಹ ಅವರನ್ನು ಈ ಪರಿಸ್ಥಿತಿಯಲ್ಲಿ ಸಿಲುಕಿಸುತ್ತದೆ. ಹೀಗಾಗಿ ತಂದೆ–ತಾಯಿಯರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಅತಿಯಾದ ವ್ಯಾಮೋಹದಿಂದ ಅವರನ್ನು ಬೆಳೆಸದೆ ಸಹಜವಾಗಿ ತಮ್ಮ ಸುಖ– ದುಃಖಗಳನ್ನು ಪರಿಚಯಿಸಿ ಸಂಸ್ಕಾರ ವಿನಯವನ್ನು ರೂಢಿಸಿಕೊಳ್ಳುವ ಹಾಗೆ ರೂಪಿಸೋಣ.



**ಪಾವನಿ**
9ನೇ ತರಗತಿ "ಬಿ" ವಿಭಾಗ

# ವೀರ ಪುತ್ರ




ವೀರ ಪುತ್ರನ ಆಗಮನ
ದೇಶವನ್ನು ಮಾಡಿದ ಪಾವನ
ನೀವೆ ನಮ್ಮ ದೇಶದ ಲಾಂಛನ
ನಿಮ್ಮ ಹೆಸರಲ್ಲಿದೆ ಒಂದು ಸಿಂಚನ
ಸಿಂಹದಂತೆ ಘರ್ಜಿಸಿದ ಜೀವ
ಸಹಿಸಿಕೊಂಡರು ಉಗ್ರರು ಕೊಟ್ಟ ನೋವು
ನೀವೇ ನಮ್ಮ ದೇಶದ ಯಜಮಾನ
ನಿಮ್ಮಿಂದ ಹೆಚ್ಚಾಯ್ತು ನಮ್ಮ ದೇಶದ ಮಾನ ಸನ್ಮಾನ

ದೇಶದ ರಹಸ್ಯ ನುಂಗಿದ ವೀರ
ಸಾಕ್ಷಿಗಳನ್ನು ನಾಶ ಮಾಡಿದ ಧೀರ
ಉಗ್ರರಿಗೆ ಎದೆ ಕೊಟ್ಟು ಹೋರಾಡಿದ ಶೂರ
ಹುತಾತ್ಮರ ಸಾವಿಗೆ ಉತ್ತರ ಕೊಟ್ಟ ಹಮ್ಮೀರ



**ಅಭಿನಂದನ್**
4ನೇ ತರಗತಿ

# ಕನ್ನಡವೇ ಸತ್ಯ... ಕನ್ನಡವೇ ನಿತ್ಯ....



1. ಎಲ್ಲಾದರೂ ಇರು, ಎಂತಾದರೂ ಇರು; ಎಂದೆಂದಿಗೂ ನೀ ಕನ್ನಡವಾಗಿರು.
2. ನಮ್ಮ ನುಡಿಯು ಕನ್ನಡ; ನಮ್ಮ ನಾಡು ಕನ್ನಡ.
3. ಕನ್ನಡಕ್ಕಾಗಿ ಕೈಯೆತ್ತು; ಬಾರದು ನಿನಗೆ ಆಪತ್ತು.
4. ಕನ್ನಡ,ಕನ್ನಡ; ಬನ್ನಿ ನಮ್ಮ ಸಂಗಡ.
5. ಒಂದಾಗಿ, ಒಂದಾಗಿ; ಕನ್ನಡಕ್ಕಾಗಿ ಮುಂದಾಗಿ.
6. ಬಾಯ್ಗೆ ಸವಿ ಕನ್ನಡ; ಕಿವಿಗೆ ಸವಿ ಕನ್ನಡ.
7. ಕನ್ನಡ ಕಲಿಯಿರಿ; ಇಲ್ಲವೇ ತೊಲಗಿರಿ.
8. ಕನ್ನಡ ಉಳಿದರೆ; ನಾವು ಉಳಿದೆವು.
9. ಎಲ್ಲೆಲ್ಲೂ ಕನ್ನಡ; ಎಲ್ಲೆಡೆಯೂ ಕನ್ನಡ.
10. ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ.
11. ಹಾರುವ ಹಕ್ಕಿ ನೋಡಲು ಚೆನ್ನ; ಕನ್ನಡ ಭಾಷೆ ನುಡಿಯಲು ಚೆನ್ನ.
12. ತಪ್ತ ಕನ್ನಡಿಗ; ಸುಪ್ತ ಅಗ್ನಿ ಪರ್ವತ.
13. ಕನ್ನಡವೇ ದಿವ್ಯ; ಕನ್ನಡವೇ ಭವ್ಯ.
14. ಕನ್ನಡವೇ ನನ್ನ ನುಡಿ, ನಾನು ಕನ್ನಡಿಗ; ಕರ್ನಾಟಕವೇ ನನ್ನ ನಾಡು.
15. ನಮ್ಮ ನುಡಿಯೇ ಕನ್ನಡ; ನಮ್ಮ ತನವೇ ಕನ್ನಡ.
16. ಕನ್ನಡವನ್ನೇರಿ; ಜೊತೆಯಲಿ ಬನ್ನಿರಿ.
17. ಕನ್ನಡವಾಗಲು ಉಸಿರು; ಬಾಳೆಲ್ಲ ಹಸಿರು.
18. ಕನ್ನಡವನ್ನು ನೀನು ಉಳಿಸಿದರೆ; ನಿನ್ನನ್ನು ಕನ್ನಡ ಉಳಿಸುತ್ತದೆ.
19. ಕನ್ನಡವೇ ಸಾರ್ವಭೌಮ; ಇದನರಿತರೆ ಬಾಳು ಕ್ಷೇಮ.
20. ಕನ್ನಡ ಉಳಿಸಿ; ಕನ್ನಡ ಬೆಳೆಸಿ.
21. ನಮ್ಮ ಮತ ಕನ್ನಡ; ನಮ್ಮ ದೈವ ಕನ್ನಡ.
22. ಕನ್ನಡ, ಕನ್ನಡ; ಎಲ್ಲೆಲ್ಲೂ ಕನ್ನಡ.
23. ಕನ್ನಡ ತಾಯಿ; ನೀ ನಮ್ಮನು ಕಾಯಿ.
24. ತನು ಕನ್ನಡ, ಮನ ಕನ್ನಡ; ನುಡಿ ಕನ್ನಡವೆಮ್ಮೆವು.
25. ಕನ್ನಡಕ್ಕಾಗಿ ದುಡಿ; ಇಲ್ಲವೇ ಮಡಿ.
26. ಕನ್ನಡಕ್ಕೆ ನೀ ದುಡಿ; ನಿನ್ನ ಆಯುಷ್ಯವು ಇಮ್ಮಡಿ.
27. ಕನ್ನಡ ಉಳಿಸಿ, ಕನ್ನಡ ಬೆಳೆಸಿ; ಕನ್ನಡವನ್ನೇ ಬಳಸಿ.
28. ಸಿರಿಗನ್ನಡಂ ಗೆಲ್ಗೆ; ಸಿರಿಗನ್ನಡಂ ಬಾಳ್ಗೆ.



**ಸನ್ನಿಧಿ ಆರ್ ಎ.,**
4ನೇ ತರಗತಿ

ಇದು ನನ್ನ ಭಾಷೆ, ಇದು ದೇಶಭಾಷೆ, ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯಭಾಷೆ, ಇದು ಮಹಾಕವಿಗಳನ್ನೂ, ಶಿಲ್ಪಿಗಳನ್ನೂ, ರಾಜಾಧಿರಾಜರನ್ನೂ, ವೀರಾಧಿವೀರರನ್ನೂ, ರಸಋಷಿದಾರ್ಶನಿಕರನ್ನೂ ಹಡೆದಿರುವ ಭಾಷೆ ಇದುವೇ ನಮ್ಮ ಕನ್ನಡ ಭಾಷೆ

# Mythri Primary School
# and
# Kumadvathi High School

## ACHIEVERS



**Vaishnavi P.K.**
VIII Std
National Judo Representation



**Pavan R.**
VIII Std
State Judo Representation



**Chittaranjan K.G.**
7th Std
State High Jump Representation



**Bharath Raj N.**
8th Std
State Judo Representation



**Avaneesh D.A.**
IX Std
State Judo Representation



**Tasmiya Anjum**
2022-23 SSLC Board Exam Topper
590/625




Kum. Chittaranjan K.G. 7th Std State Level High Jump Athletes



10th Standard Students 2023-24 Batch



7th Standard Students 2023-24 Batch



Mythri Lower and Higher Primary School & Kumadvathi High School Teaching & Non Teaching Staff



An orientation Programme about Child Marriage by Shree. Sathyanaraya Lawyer Shikaripura.



Celebration of World Environment Day



An Oath taking Ceremony of Elected School Parliament Members




Celebration of
Shree Krishna Janmastmi



Science & Maths Passing Package Question Bank for 10th Std Released by Shree.B.Y. Vijayendra MLA Shikaripura






Innovative Models in Vidya Bharati Science Exhibition



Yoga for
Vasudhaiva Kutumbakam



Dance Performance by
Primary Students in
Independence Day



Kum. Meghana B R 10th Std
receiving Certificate and
3000/- Rs Cash Prize from
Shree. Vinayananda Saraswathi
Swamaji at Vivekananda Ashram
Shivamogga (Speech on Swamy
Vivekananda Chicago Visit)



Participation of Band Set Troops in Taluk Level Independence Day




Kum. Meghana B.R. & Kum. Vidya Lakshmi S.T. got second Place in district level quiz competition conducted by Govt.of Karnataka





Teacher's With "SEVA SIRI AWARD". Honored By Swamy Vivekananda Vidya Samsthe.

# Drawing Gallery













# A GREAT INDIAN SAINT

Swami vivekananda real name was Narendranatha Dutta. He was born in a Bengali family on January 12th 1863. Swami vivekananda's birthday was celebrated as "national youth day" in India. He was a symbol of high thinking and simple living. His father name was Sri. Vishwanath Dutta and mother name was Bhuvaneswari Devi. From childhood on wards he was showing intellectual power by asking unexpected questions and thinking. Vivekananda fame helped him to established Ramakrishna mission in many places. The mission runs many schools and hospitals. It helps poor people in many ways. Swami vivekananda introduced Hindu philosophies of a Vedanta and yoga in Europe and America. He was influenced by the teaching of a Mahabharat and Ramayana. "Pavana Putra Hanuman" was his ideal for swami's life.

At the end of 19th century there was a conference of all reasons in Chicago USA Vivekananda represented India at that conference. He started his speech with a silent prayer and he address as "Sisters And Brothers of America" everyone that deeply Influenced by that speech. Swami Vivekananda published his lifetime. He was not married because he considered all women's to be the divine mother of universe. Swami Vivekananda died on July 4th 1902 at the age of 39 due to rupture in the blood vessels of brain by high blood pressure at Belur Math Howrah.



**Teju**
5th Std

---

# MY EXPERIENCE IN SEDAM

Our School providing a very big opportunities to achieve in sports, education and cultural sector. So I got a wonderful opportunity to go Sedam for Vidya Bharati Science Exhibition. I gained a lot of knowledge when I went to Sedam. I came to know the excellent abilities of other students who came from the different districts. I learnt many things in sedam. The students of many districts entertained us by performing the dance. I felt that it is wonderful memory in my life so I am very thankful to my teachers and Headmaster for lending me this opportunity.



**Meghana B.R.**
10th Std

---

# SCIENCE EXHIBITION AT SEDAM

I am great full this opportunity this is my first experience. I have enjoyed a lot and I got information about the Science competition. After the competition I felt to speak English. The Competitors were came from different district. I have learnt how to present the PPT in stylish by using more English language. I have learnt how to made model about the maths and science by scientist. The scientist asked question related to the science. And so many information about science the scientist taught to us. I have gain the knowledge about so many more topics. This experience is my best experience. In our school the teachers were helps to made PPT presentation and they encouraged me. This opportunity was given by our teachers. So I would like to say thanks because this made me more confident about myself. Thank you for all the teachers.



**Pranathi V.**
7th Std

## HEALTH IS THE BEST WEALTH

There is an old popular saying 'Health is wealth' is a one line treasure indeed Health does not mean the absence of physical troubles only but refers to a state of complete physical, mental and social well being In the past decade there has been an unprecedented rise in the growing problem of obesity in children which is leading to type Diabetes.



**Anagha Pandith**
6th Std

## THE TWO POTATOES

Once upon a time, there were two potatoes one was smooth & perfect on the outside, while the other had many bumps & imperfection. The perfect potato was chosen by the former to be sold at the market, while the imperfect potato was left behind. But as fate would have it, the imperfect potato was the one that had the most delicious taste & the farmer regrets not choosing it.

**Moral of the story is :** Don't judge a book by its cover looks can be deceiving, it's the inner qualities that truly matter.



**Atharva S. Totagi**
5th Std

## ACHIEVEMENT




Achieving things are easy
But achieving success should crazy.
When all wishes the best
I want to take rest.
Reading time for exams
Dreaming time for success.
Distracting thoughts make loss
Extracting knowledge makes wise.
Achieving ends up at aim
Achieving only is my aim.



**Anvitha R. Bosle**
10th Std

## A PRECIOUS ONE IN MY LIFE

A little thing that's know about you
You are my strength and trust for life
Who fights in my heart daily and takes a place!

Who listens my pain and cries with me
And then brings a happiness in my life.

Who scolds me when I was in the wrong way
Who loves me forever and loving till now.

Mom asked, dad asked, teachers and so
Who is he that you love him more?

He is my brother of my life
Who is leg puller in my way

I love you always and always
You don't go away from me
forever......



**Vidya Lakshmi**
10th Std

# ರಾಜ್ಯ ಮಟ್ಟದ ಎತ್ತರ ಜಿಗಿತ

ನಾನು ಚಿತ್ತರಂಜನ್ ಕೆ.ಜಿ ಮೈತ್ರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನಾನು ಎತ್ತರ ಜಿಗಿತ ಆಟದಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದೇನೆ. ಈ ಆಟದಲ್ಲಿ ನಾನು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಹೈದ್ರಾಬಾದ್ ಗೆ ಹೋಗಿದ್ದೆ ಅಲ್ಲಿ ನನ್ನ ಅನುಭವ ತುಂಬಾ ಚೆನ್ನಾಗಿತ್ತು. ಅದರಲ್ಲಿ ಕೆಲವೊಂದಿಷ್ಟನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಾನು ಹೈದ್ರಾಬಾದಿನಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡು ನನ್ನ ಶಾಲೆಗೆ ಹಿರಿಮೆಯನ್ನು ತಂದುಕೊಟ್ಟಿದ್ದೇನೆ. ಆದರೆ ನನಗೆ ಒಂದು ಬೇಜಾರು, ಅದು ಏನೆಂದರೆ ನಾನು ಪ್ರಥಮ ಸ್ಥಾನವನ್ನು ಪಡೆದುಕೊಳ್ಳಲು ಆಗಲಿಲ್ಲ ಎಂದು. ಇದಕ್ಕೆ ತುಂಬಾ ಕಾರಣಗಳಿವೆ ಎತ್ತರ ಜಿಗಿತದಲ್ಲಿ ನನ್ನ ಪ್ರಯತ್ನ ಇನ್ನು ಬೇಕಾಗಿತ್ತು. ಹಾಗೂ ಅದಕ್ಕೆ ಬೇಕಾದ ಸೌಲಭ್ಯದ ಕೊರತೆಯಿತ್ತು. ಅಲ್ಲಿ ನನಗಿಂತ ದೊಡ್ಡವರು, ಭಾಗವಹಿಸಿದ್ದರು. ಆದ್ದರಿಂದ ನನಗೆ ಅಲ್ಲಿ ತೃತೀಯ ಸ್ಥಾನ ಬರಲು ಕಾರಣವಾಯಿತು. ಅಲ್ಲಿಂದ ನಾನು ಶಿಸ್ತನ್ನು ಹೇಗೆ ಪಾಲಿಸಬೇಕು ಎಂಬುದನ್ನು ಕಲಿತೆ. ಹಾಗೂ ಇನ್ನು ಮುಂದೆ ಹೆಚ್ಚು ಪ್ರಯತ್ನ ಪಟ್ಟು ಈ ಕ್ರೀಡೆಯಲ್ಲಿ ಒಂದು ಸಾಧನೆ ಮಾಡುತ್ತೇನೆ ಎಂದು ಹೇಳಲು ಇಷ್ಟಪಡುತ್ತೇನೆ. ನನಗೆ ಸಹಕರಿಸಿದ ನನ್ನ ಶಾಲೆಯ ಎಲ್ಲಾ ಶಿಕ್ಷಕರಿಗೂ, ನನ್ನ ತಂದೆ ತಾಯಿಯರಿಗೂ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ.



**ಚಿತ್ತರಂಜನ ಕೆ.ಜಿ.**
7ನೇ ತರಗತಿ

---

# ಸೇಡಂನಲ್ಲಿ ನನ್ನ ಅನುಭವ

ವಿದ್ಯಾಭಾರತಿಯಿಂದ ವಿಜ್ಞಾನ ಮತ್ತು ಗಣಿತ ಮಾದರಿ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿತ್ತು. ಈ ಪ್ರದರ್ಶನಕ್ಕೆ ನಾನು ನನ್ನ ಸ್ನೇಹಿತರು ಹೋಗಿದ್ದೆವು. ಅಲ್ಲಿ ನಮ್ಮೊಂದಿಗೆ ಸಂಭಾಷಣೆ ನಡೆಸಲು ಇಬ್ಬರು ವಿಜ್ಞಾನಿಗಳನ್ನು ಆಹ್ವಾನಿಸಿದ್ದರು. ಅವರು ಆ ಒಂದು ವಿಷಯದ ಬಗ್ಗೆ ತುಂಬಾ ಚೆನ್ನಾಗಿ ಮಾಹಿತಿ ನೀಡಿದರು. ಇಲ್ಲಿ ನಾನು "Concentric Circle Drawing Robot Model" ನ್ನು ಮಾಡಿದ್ದೆನು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲಿಗೆ ಬಂದಂತಹ ವಿದ್ಯಾರ್ಥಿಗಳು ವಿವಿಧ Model ಗಳನ್ನು ಮಾಡಿಕೊಂಡು ಬಂದಿದ್ದರು. ಅವುಗಳನ್ನು ವೀಕ್ಷಿಸಿದಾಗ ನಾನು ಮಾಡಿದ model ನ ಕೊರತೆಗಳೇನು, ಇನ್ನು ಹೇಗೆ ಹೆಚ್ಚಿನ ರೀತಿಯಲ್ಲಿ ತಯಾರು ಮಾಡಬಹುದು ಎಂದು ತಿಳಿದುಕೊಂಡೆನು. ಅಲ್ಲಿ ಹೋಗಿದ್ದರಿಂದ ನನಗೆ ಒಂದು ಒಳ್ಳೆಯ ತರಬೇತಿ ದೊರೆಯಿತು. ಇಷ್ಟಲ್ಲದೆ ಅಲ್ಲಿನ ಊಟ ಮತ್ತು ವಸತಿ ವ್ಯವಸ್ಥೆ ತುಂಬಾ ಚೆನ್ನಾಗಿತ್ತು. ಈ ಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಸಂಸ್ಥೆಗೂ, ಶಾಲೆಗೂ ಹಾಗೂ ಶಿಕ್ಷಕ ವೃಂದದವರಿಗೂ ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ.



**ಭವಾನಿ ಪಿ.**
9 ನೇ ತರಗತಿ

---

# ನನ್ನ ಮನೆ

ನನ್ನ ಮನೆಯ ಬಗ್ಗೆ ಮಾತನಾಡುವುದಕ್ಕೆ ನನಗೆ ಹೆಮ್ಮೆ. ಏಕೆಂದರೆ ನಮ್ಮ ಮನೆಯಲ್ಲಿ ಆರು ಜನ ವಾಸಿಸುತ್ತಿದ್ದಾರೆ. ಅಜ್ಜ ತುಂಬಾ ಚೆನ್ನಾಗಿ ಕಥೆ ಹೇಳುತ್ತಾರೆ. ದಿನಾಲು ರಾಮಾಯಣ ಮತ್ತು ಮಹಾಭಾರತ ಕಥೆಯನ್ನು ಹೇಳುತ್ತಾರೆ. ನಮಗೆ ಏನಾದರೂ ಕಾಯಿಲೆ ಬಂದರೆ ಚಿಕಿತ್ಸೆ ನೀಡುತ್ತಾರೆ. ಅಜ್ಜಿ ಮತ್ತು ಅಜ್ಜ ಹೇಳುತ್ತಾರೆ, ಆ ಜಾತಿ, ಈ ಜಾತಿ ಎಂದು ಬೇಧ ಮಾಡಬಾರದು. ಎಲ್ಲರೂ ಒಂದೇ ಎಂದು ಹೇಳಿಕೊಟ್ಟಿದ್ದರು. ನಮ್ಮ ಅಜ್ಜ ಒಳ್ಳೆಯದನ್ನೇ ನುಡಿಯಬೇಕು , ಕೆಟ್ಟದ್ದನ್ನು ಮಾಡಬಾರದು ಎಂದು ಹೇಳಿಕೊಟ್ಟಿದ್ದ ಅಜ್ಜ, ಅಜ್ಜಿ ಮತ್ತು ಅಮ್ಮ , ಅಪ್ಪನ ಮಾತನ್ನು ಕೇಳಿದರೆ ಮುಂದೆ ನಾವು ದೊಡ್ಡ ವ್ಯಕ್ತಿ ಆಗಬಹುದು. ನಾವು ಚೆನ್ನಾಗಿ ಓದಬೇಕೆಂದರೆ ಹಿರಿಯರ ಆಶೀರ್ವಾದ ನಮ್ಮ ಮೇಲೆ ಯಾವಾಗಲೂ ಇರಬೇಕು. ನಾನು ಓದಿ ದೊಡ್ಡ ವ್ಯಕ್ತಿಯಾಗುತ್ತೇನೆ ಎಂದು ನನ್ನ ಮೇಲೆ ನನಗೆ ನಂಬಿಕೆ ಇದೆ. ಎಂದು ನನ್ನ ಮನೆಯ ಬಗ್ಗೆ ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ.



**ಶ್ರೇಯಾ**
5ನೇ ತರಗತಿ

# ನನ್ನ ಚಿಕ್ಕ ಕುಟುಂಬ




ನನ್ನ ಹೆಸರು ಅಮೂಲ್ಯ ಜಿ ನನಗೆ ನನ್ನ ಕುಟುಂಬದ ಬಗ್ಗೆ ತಿಳಿಸಲು ತುಂಬಾ ಖುಷಿಯಾಗುತ್ತದೆ. ನನ್ನದು ಚಿಕ್ಕ ಕುಟುಂಬ ನನ್ನ ಕುಂಟುಂಬದ ಪರಿಚಯದಲ್ಲಿ ಮೊದಲನೆಯದಾಗಿ ತಿಳಿಸುವುದು ನನ್ನ ಅಜ್ಜಿ ( ಅಪ್ಪನ ಅಮ್ಮ ) ನಮ್ಮ ಮನೆಯ ಹಿರಿಯ ಜೀವ. ಇವರು ನಮ್ಮನ್ನು ತುಂಬಾ ಪ್ರೀತಿ ಮಾಡುತ್ತಾರೆ. ನನ್ನ ತಾತ ನಾನು ಹುಟ್ಟುವ ಮೊದಲೇ ತೀರಿಹೋಗಿದ್ದರು , ಈಗ ನನ್ನ ತಂದೆಯ ಬಗ್ಗೆ ತಿಳಿಸುತ್ತೇನೆ. ಇವರು ನನ್ನ ಮುದ್ದಿನ ಪ್ರೀತಿಯ ಅಪ್ಪ. ನನ್ನ ಬಗ್ಗೆ ತುಂಬಾ ಕಾಳಜಿ ಇವರಿಗೆ. ನನ್ನ ಅಪ್ಪ ಒಬ್ಬ ರೈತ ಎಂದು ಹೇಳಲು ತುಂಬಾ ಹೆಮ್ಮೆಯಾಗುತ್ತದೆ. ನನ್ನ ಅಪ್ಪ ತನ್ನ ಬಗ್ಗೆ ಎಂದಿಗೂ ಯೋಚನೆ ಮಾಡದೆ ತನ್ನ ಕುಟುಂಬದ ಸಂತೋಷಕ್ಕೆ, ನಮ್ಮ ಎಲ್ಲಾ ಆಸೆಗಳನ್ನು ಈಡೇರಿಸಲು ತುಂಬಾ ಕಷ್ಟಪಡುತ್ತಾರೆ. ಹಗಲು, ರಾತ್ರಿ ಎನ್ನದೆ ಕಷ್ಟಪಡುತ್ತಾರೆ. ನನ್ನ ತಾಯಿಯ ಬಗ್ಗೆ ತಿಳಿಸುತ್ತೇನೆ. ನನ್ನ ಅಮ್ಮ ನನಗೆ ತುಂಬಾ ಅಚ್ಚು–ಮೆಚ್ಚು. ನನ್ನ ಪ್ರೀತಿಯ ಅಮ್ಮ ನನಗೆ ಯಾವುದೇ ತೊಂದರೆ ಬರದೆ ಇರುವ ಹಾಗೆ ಕಾಪಾಡುವ ಜೀವ ತುಂಬಾ ಪ್ರೀತಿ ಮಾಡುತ್ತಾರೆ. ನನಗೆ ನನ್ನ ಅಮ್ಮ ಎಂದರೆ ತುಂಬಾ ಇಷ್ಟ. ನಾನು ಏನು ಕೇಳಿದರು ತಕ್ಷಣವೇ ಮಾಡಿಕೊಡುತ್ತಾರೆ. ನಮ್ಮನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾರೆ. ನನಗೆ ಸ್ವಲ್ಪ ಹುಷಾರಿಲ್ಲದಿದ್ದರೆ ಅವರು ತುಂಬಾ ನೋವು ಪಡುತ್ತಾರೆ. ಅವರು ನನ್ನ ಆಟ–ಪಾಠದಲ್ಲಿ ಭಾಗಿಯಾಗುತ್ತಾರೆ. ತಪ್ಪಿದ್ದರೆ ತಿದ್ದಿ ಹೇಳುತ್ತಾರೆ. ಒಳ್ಳೆಯ ರೀತಿಯಲ್ಲಿ ಎಲ್ಲರ ಜೊತೆ ಬೆರೆಯಲು , ಹಿರಿಯರಿಗೆ ಗೌರವ ಕೊಡುವುದನ್ನು ಮತ್ತು ತಪ್ಪು ಸರಿಗಳನ್ನು ಹೇಳಿಕೊಡುತ್ತಾರೆ. ತಪ್ಪು ಮಾಡಿದರೆ ಆ ಕ್ಷಣವೇ ಶಿಕ್ಷೆ ಕೊಡುತ್ತಾರೆ. ತಿದ್ದಿ ನಡೆಯುವಂತೆ ಬುದ್ಧಿ ಹೇಳುತ್ತಾರೆ ನನ್ನ ಮುದ್ದಿನ ಅಮ್ಮ. ನನಗೆ ಒಬ್ಬ ಅಣ್ಣ ಇದ್ದಾನೆ. ನನ್ನ ಅಣ್ಣ ನನ್ನ ತುಂಟಾಟವನ್ನು ಸಹಿಸುತ್ತಾನೆ. ನನ್ನ ಓದಿನಲ್ಲಿ ಸಹಾಯ ಮಾಡುತ್ತಾನೆ. ನಾನು ಅಣ್ಣ ಆಟವಾಡುತ್ತೇವೆ. ನನ್ನ ಮನೆಯಲ್ಲಿ ಅಜ್ಜಿ, ಅಪ್ಪ, ಅಮ್ಮ, ಅಣ್ಣ, ನಾನು ಇದ್ದೇವೆ. ನನ್ನದು ಪುಟ್ಟ ಕುಟುಂಬ, ಪ್ರೀತಿಯ ಕುಟುಂಬ.




**ಅಮೂಲ್ಯ ಜಿ.**
5ನೇ ತರಗತಿ

---

# ನೀನೆ ಬುದ್ಧಿವಂತ

ಒಂದೂರಲ್ಲಿ ಸೋಮು ಎಂಬ ಹುಡುಗನಿಗೆ ಪ್ರತಿ ವಸ್ತುಗಳನ್ನು ನೋಡಿದಾಗ ದೇವರು ಏಕೆ ಹೀಗೆ ಒಂದೊಂದು ವಸ್ತುವನ್ನು ಒಂದೊಂದು ರೀತಿಯಲ್ಲಿ ಸೃಷ್ಟಿ ಮಾಡಿದ ಎಂಬ ಕುತೂಹಲ ಕಾಡುತ್ತಿತ್ತು. ಹೀಗಿರುವಾಗ ಒಮ್ಮೆ ಆತ ತೋಟದಲ್ಲಿ ಹಾದು ಹೋಗುವಾಗ ಅನೇಕ ಕುಂಬಳಕಾಯಿಗಳು ಬಳ್ಳಿಯಲ್ಲಿ ಬಿಟ್ಟಿರುವುದನ್ನು ನೋಡುತ್ತಾನೆ. ದೊಡ್ಡ ಮತ್ತು ದಪ್ಪವಾಗಿ ಬಿಟ್ಟ ಕುಂಬಳಕಾಯಿಗಳನ್ನು ನೋಡಿ ಸೋಮುವಿಗೆ ಆಶ್ಚರ್ಯವಾಗುತ್ತದೆ. ದೇವರೇಕೆ ಈ ಕುಂಬಳಕಾಯಿಗಳನ್ನು ಬಳ್ಳಿಯಲ್ಲಿ ಬಿಡುವಂತೆ ಸೃಷ್ಟಿ ಮಾಡಿದ? ಇಷ್ಟೊಂದು ದೊಡ್ಡ ಗಾತ್ರದ ಕಾಯಿಯನ್ನು ಮರದಲ್ಲಿ ಬೆಳೆಯುವಂತೆ ಸೃಷ್ಟಿ ಮಾಡಬೇಕಿತ್ತಲ್ವೇ? ಹೀಗೇಕೆ ನೆಲದ ಮೇಲೆ ಬಳ್ಳಿಯಲ್ಲಿ ಕಾಯಿಯಾಗುವಂತೆ ಮಾಡಿದ?ದೇವರಿಗೆ ಬುದ್ದಿ ಸಾಲದು ಎಂದುಕೊಂಡು ಮುಂದೆ ಸಾಗಿದ.

ಸ್ವಲ್ಪ ದೂರ ಸಾಗಿದ ಬಳಿಕ ಅತ್ತಿ ಮರದ ಕೆಳಗೆ ನಡೆದು ಬರುತ್ತಿದ್ದ ಸೋಮುವಿನ ತಲೆಯ ಮೇಲೆ ಮರದಿಂದ ಇದ್ದಕ್ಕಿದಂತೆ ಅತ್ತಿ ಹಣ್ಣು ಬಿತ್ತು. ಅತ್ತಿ ಹಣ್ಣು ಹಗುರ ಮತ್ತು ಮೆದುವಾಗಿದ್ದ ಕಾರಣ ಆತನಿಗೆ ಪೆಟ್ಟಾಗಲಿಲ್ಲ. ಆಗ ಸೋಮು 'ದೇವರೇ ನೀನೆ ಬುದ್ಧಿವಂತ ನಾನು ನಿನಗೆ ಬುದ್ದಿಯಿಲ್ಲವೆಂದು ತಿಳಿದಿದ್ದೆ, ಈಗ ನನಗೆ ನನ್ನ ಬುದ್ಧಿವಂತಿಕೆಯ ಬಗ್ಗೆ ಅರಿವಾಯಿತು. ಕುಂಬಳಕಾಯಿಗಳು ಬಳ್ಳಿಯಲ್ಲಿರದೇ ಮರದಲ್ಲಿ ಬಿಟ್ಟಿದ್ದರೆ ನಾನು ಸತ್ತು ಹೋಗುತ್ತಿದ್ದೆ. ಬುದ್ಧಿವಂತಿಕೆಯಲ್ಲಿ ನಿನ್ನನ್ನು ಮೀರಿಸುವವರು ಯಾರೂ ಇಲ್ಲ.ಅದಕ್ಕೆ ನೀನು ದೇವರಾಗಿದ್ದೀಯ ಎಂದು ಕೊಂಡು ತನ್ನ ಸಣ್ಣತನವನ್ನು ನೆನೆಯುತ್ತಾ ಅಲ್ಲಿಂದ ಮುಂದೆ ಸಾಗಿದ.



**ಸಂಜನ ಈ.**
10ನೇ ತರಗತಿ

# ಚೈತನ್ಯ ರೂಪಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದ ರವರು 12 ಜನವರಿ 1863 ರಲ್ಲಿ ಕೋಲ್ಕತ್ತಾದಲ್ಲಿ ಜನಿಸಿದರು ಅವರ ಬಾಲ್ಯದ ಹೆಸರು ನರೇಂದ್ರ ನಾಥ ದತ್ತ. ಇವರು ತಮ್ಮ ಹುಟ್ಟು ಹಬ್ಬದ ದಿನವನ್ನು ರಾಷ್ಟ್ರೀಯ ಯುವಕರ ದಿನ ಎಂದು ಆಚರಿಸುತ್ತಾರೆ. ಇವರ ತಂದೆಯ ಹೆಸರು ವಿಶ್ವನಾಥ ದತ್ತ ಇವರ ತಾಯಿ ಭುವನೇಶ್ವರಿ ದೇವಿ. ಅವರು ಹಿಂದೂ ಸನ್ಯಾಸಿ ಹಾಗೂ ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದರು. ಹಾಗೂ ಅದಾದ ಮೇಲೆ ವಿವೇಕಾನಂದ ಎಂದು ಹೆಸರು ಪಡೆದರು. ಕಲ್ಕತ್ತೆಯ ಸ್ಕಾಟಿಶ್ ಚರ್ಚ್ ಕಾಲೇಜಿನಲ್ಲಿ ತತ್ವ ಶಾಸ್ತ್ರ ಅಧ್ಯಯನ ಮಾಡಿದರು. ಅವರು ಚಿಕಾಗೋದಲ್ಲಿ "ವಿಶ್ವ ಧರ್ಮ ಸಮ್ಮೇಳನದಲ್ಲಿ "ಭಾಷಣ ಮಾಡುವಾಗ ಮೊದಲ ಮಾತು ನನ್ನ ಅಮೇರಿಕದ ಸಹೋದರ ಸಹೋದರಿಯರೆ ಎಂಬುದಾಗಿತ್ತು. ಅವರು ಮೇ 1897 ರಲ್ಲಿ ಕೋಲ್ಕತ್ತಾದಲ್ಲಿ "ರಾಮಕೃಷ್ಣ ಮಿಷನ್" ಸ್ಥಾಪಿಸಿದರು. ಅವರು ರಚಿಸಿದ ರಾಜಯೋಗ, ಕರ್ಮ ಯೋಗ, ಭಕ್ತಿ ಯೋಗ ಪ್ರಮುಖ ಕೃತಿಗಳು. ಅವರು ಒಬ್ಬ ಆಧ್ಯಾತ್ಮಿಕ ನಾಯಕ ಮತ್ತು ಸಮಾಜ ಸುಧಾರಕರಾಗಿದ್ದರು. ಅವರು ರಾಮ ಕೃಷ್ಣ ಮಠಗಳನ್ನು ಸ್ಥಾಪಿಸಿದರು. ಹಾಗೂ "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬುದು ಅವರ ಘೋಷವಾಕ್ಯವಾಗಿತ್ತು. 1888 ರಲ್ಲಿ ನರೇಂದ್ರರು ಭಾರತ ಪರ್ಯಟನೆ ಮಾಡಿದರು ಹಾಗೆ ಇವರು 4 ಜುಲೈ1902 ರಂದು ವೀರ ಮರಣವನ್ನು ಹೊಂದಿದರು.

ನನ್ನ ಭರವಸೆಯೆಲ್ಲ ಇಂದಿನ ಯುವ ಪೀಳಿಗೆಯ ಮೇಲೆ ನಿಂತಿದೆ. ಯುವಜನರನ್ನು ಒಂದುಗೂಡಿಸಿ ಸಂಘಬದ್ಧರಾಗಿ ದುಡಿಯುವಂತೆ ಮಾಡಲು ನಾನು ಜನ್ಮತಾಳಿದ್ದೇನೆ. ಇಂಥಹ ಯುವ ಶಕ್ತಿಯೊಂದಿಗೆ ಭಾರತದ ಅತ್ಯಂತ ದೀನ–ಹೀನ ಸ್ಥಿತಿಯಲ್ಲಿರುವ ಜನರ ಮನೆಬಾಗಿಲುಗಳಿಗೆ ಭರವಸೆ, ಸಾಂತ್ವನಗಳನ್ನು, ಧರ್ಮ, ವಿದ್ಯೆ ಇವುಗಳನ್ನು ತಲುಪಿಸುವಂತೆ ಮಾಡಬೇಕು, ಇದನ್ನು ಮಾಡಿಯೇ ಮಾಡುತ್ತೇನೆ" ಎಂದು ಸದಾ ಹೇಳುತ್ತಿದ್ದರು ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರ ಸ್ಫೂರ್ತಿದತ್ತವಾದ ನುಡಿಗಳನ್ನು ನೋಡಿದರೆ ಅವರೆಷ್ಟು ಭರವಸೆಯನ್ನು ನಮ್ಮ ದೇಶದ ಯುವ ಜನಾಂಗದ ಮೇಲೆ ಹೊಂದಿದ್ದರು ಎಂಬುದು ಅರಿವಾಗುತ್ತದೆ. ಈ ಪಾಂಚಜನ್ಯ ಸದೃಶ ವಾಣಿಯು ಮೊಳಗಿ, ಸುಮಾರು ನೂರಾ ಐವತ್ತು ವರ್ಷಗಳೇ ಕಳೆದಿದೆ. ಈ ಭರವಸೆಯ ನುಡಿಗಳನ್ನು ಸಫಲಗೊಳಿಸುವ ಜವಬ್ದಾರಿ ನಾಳೆಯ ಯುವ ಪ್ರಜೆಗಳಾದ ಅಂದರೆ ನಮ್ಮಗಳ ಮೇಲಿದೆ.

ಸ್ವಾಮಿ ವಿವೇಕಾನಂದರ ಪ್ರಕಾರ ನಿಜವಾದ ವಿದ್ಯೆ ಎಂದರೆ ಸರ್ವರಲ್ಲಿಯೂ ಅಡಗಿರುವ ಆ ಚೈತನ್ಯವನ್ನು ಅರಿತು ಇಡೀ ವಿಶ್ವವೇ ನಮ್ಮದು ಎಂಬ ಉದಾತ್ತ ಭಾವನೆಯಿಂದ ವಿಶ್ವಮಾನವ ತತ್ವವನ್ನು ಅಳವಡಿಸಿಕೊಂಡು ಬಾಳುವುದಾಗಿದೆ ಎಂದಿದ್ದಾರೆ. ಹಾಗಾಗಿ ನಾಳೆಗಳ ಭರವಸೆಯ ಚೈತನ್ಯ ರೂಪಿಗಳಾದ ನಾವುಗಳು ಭಾರತದ ನಿರ್ಮಾಣದಲ್ಲಿ ಶ್ರಮಿಸೋಣ. ದೇಶವಿರುವುದು ಯುವಕರ ಶಕ್ತಿಯಲ್ಲಿ ನಮ್ಮ ಉದ್ದೇಶ ಸಾಕಾರಗೊಳ್ಳಲಿ.



**ವಶಿಷ್ಠ ಎ.ಎಸ್**
6ನೇ ತರಗತಿ

---

# ಒರಟ ಬೆಕ್ಕು ಮತ್ತು ಮುಗ್ಧ ಮನುಷ್ಯ.

ಒಂದು ದಿನ ಒಬ್ಬ ವ್ಯಕ್ತಿಯು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಹತ್ತಿರದ ಮರದಿಂದ ಬೆಕ್ಕು ಮಿಯಾಂವ್ ಎನ್ನುವ ಶಬ್ದವನ್ನು ಕೇಳಿದನು. ಬೆಕ್ಕು ಸಿಲುಕಿಕೊಂಡಿರಬಹುದು ಅಥವಾ ಹೊರಬರಲು ಸಹಾಯಕ್ಕಾಗಿ ಕೂಗುತ್ತಿರಬಹುದು ಎಂದು ದಾರಿಹೋಕ ಕೈಚಾಚಿ ಬೆಕ್ಕನ್ನು ಕೆಳಗಿಳಿಸಲು ಪ್ರಯತ್ನಿಸಿದನು. ಆದರೆ ಮನುಷ್ಯ ತನಗೆ ತೊಂದರೆ ಕೊಡಲು ಪ್ರಯತ್ನಿಸುತ್ತಿರಬೇಕೆಂದು ಭಾವಿಸಿದ ಬೆಕ್ಕು ಹೆದರಿ ತನ್ನ ಉಗುರುಗಳಿಂದ ಮನುಷ್ಯನನ್ನು ಪರಚಿತು. ಮನುಷ್ಯನು ನೋವಿನಿಂದ ಕಿರುಚಿದನು. ಬೆಕ್ಕು ತನ್ನ ಕೈಗಳನ್ನು ಪದೇ ಪದೇ ಪರಚುವುದನ್ನು ಮುಂದುವರೆಸಿದರೂ ಬೆಕ್ಕನ್ನು ಕಾಪಾಡುವುದರಿಂದ ಹಿಂದೆ ಸರಿಯಲ್ಲಿಲ್ಲ. ಇದನ್ನು ಗಮನಿಸಿದ ಇನ್ನೊಬ್ಬ ದಾರಿಹೋಕ ಇರಲಿ ಬಿಡಿ ಬೆಕ್ಕು ನಂತರ ಹೊರಬರುತ್ತದೆಂದು ಹೇಳಿದನು. ಆದರೆ ಆ ಮನುಷ್ಯ ದಾರಿಹೋಕನ ಮಾತಿಗೆ ಗಮನ ಕೊಡದೆ ಅವನು ಬೆಕ್ಕನ್ನು ಕೆಳಗಿಳಿಸುವವರೆಗೂ ಪ್ರಯತ್ನಿಸಿದನು. ಬೆಕ್ಕನ್ನು ಬಿಡಿಸಿದ ನಂತರ ಅವನು ಆ ಮನುಷ್ಯನಿಗೆ " ಬೆಕ್ಕು ಒಂದು ಪ್ರಾಣಿ ಮತ್ತು ಅದರ ಪ್ರವೃತ್ತಿಯು ಅದನ್ನು ಪರಚುವಂತೆ ಮತ್ತು ಆಕ್ರಮಣ ಮಾಡುವಂತೆ ಮಾಡುತ್ತದೆ. ನಾನು ಮನುಷ್ಯ, ಮತ್ತು ನನ್ನ ಪ್ರವೃತ್ತಿಗಳು ನನ್ನನ್ನು ಸಹಾನುಭೂತಿ ಹಾಗೂ ಕರುಣೆ ತೋರುವಂತೆ ಮಾಡುತ್ತವೆ." ಎಂದು ಹೇಳಿದನು.



**ಸಂಜನ ಈ.**
10ನೇ ತರಗತಿ

# ಭರತ ನಾಟ್ಯದ ಅರ್ಥ ಹಾಗೂ ಮಹತ್ವ

ಭರತ ನಾಟ್ಯವು ದಕ್ಷಿಣ ಭಾರತದ ಪಾರಂಪರಿಕ ನೃತ್ಯ ಕಲೆ. ಭರತ ಮುನಿಯಿಂದ ರಚಿಸಲ್ಪಟ್ಟ ನಾಟ್ಯಶಾಸ್ತ್ರ. "ಭರತ–ನಾಟ್ಯ" ಎಂಬ ಪದವು "ಭರತ" ಎಂಬ ಪದದಿಂದ ಕೂಡಿದೆ. ಭ–ಎಂದರೆ "ಭಾವ", ರ–ಎಂದರೆ "ರಾಗ", ತ–ಎಂದರೆ "ತಾಳ" ಎಂಬ ಅರ್ಥವಿದೆ. ಅಂದರೆ ಭಾವ, ರಾಗ ಮತ್ತು ತಾಳಯುತವಾದ ನೃತ್ಯಕ್ಕೆ "ಭರತ ನಾಟ್ಯ" ಎಂದು ಕರೆಯುವುದು ರೂಢಿ.

ಹಿನ್ನೆಲೆ :– (ನಾಟ್ಯದ ಉತ್ಪತ್ತಿ) :– ಈ ಭತರನಾಟ್ಯವು ಹೇಗೆ ಸೃಷ್ಟಿಯಾಯಿತು ಎಂಬುದನ್ನು ಭರತ ಮುನಿಯು ಬರೆದ ಗ್ರಂಥ "ನಾಟ್ಯಶಾಸ್ತ್ರ" ಎಂಬ ಕೃತಿಯಲ್ಲಿ ಕಾಣಬಹುದು. ಈ ಭರತಮುನಿ ಯಾರು?. ಭರತ ಮುನಿ ಭಾರತದ ನಾಟ್ಯಶಾಸ್ತ್ರಜ್ಞ ಇವರನ್ನು ಭಾರತದ ರಂಗಭೂಮಿಯ "ಪಿತಾಮಹ" ಎನ್ನುವರು. ಇವರು ಬರೆದ ನಾಟ್ಯಶಾಸ್ತ್ರ ಗ್ರಂಥವು ಭಾರತದಲ್ಲಿ ನಾಟ್ಯ ಮತ್ತು ರಂಗಭೂಮಿಗೆ ಹೊಸ ದಿಸೆಯನ್ನು ತೋರಿಸಿದೆ.

ಭರತನಾಟ್ಯದ ಸೃಷ್ಠಿ ಹೇಗಾಯಿತು ಎಂದರೆ, ಬ್ರಹ್ಮನು 4 ವೇದಗಳನ್ನು ಅಧ್ಯಯನಿಸಿ ಋಗ್ವೇದದಿಂದ – ಮಾತನ್ನು ಸಾಮವೇದದಿಂದ – ಸಂಗೀತವನ್ನು, ಯಜುರ್ವೇದದಿಂದ ಅಭಿನಯವನ್ನು, ಅಥರ್ವಣ ವೇದದಿಂದ – ರಸವನ್ನು ಆರಿಸಿ ಐದನೇ "ನಾಟ್ಯವೇದ" ವನ್ನು ರಚಿಸಿದನು. ನಂತರ ಬ್ರಹ್ಮನು ನಾಟ್ಯಾಲಂಕಾರ ಚತುರೆಯರಾದ 24 ಅಪ್ಸರೆಯರನ್ನು ಸೃಷ್ಠಿಸಿ ನಾಟ್ಯಕಲೆಯನ್ನು ಪ್ರಚಾರಪಡಿಸಲು ಭರತ ಮುನಿಗೆ ವಹಿಸಿದರು, ನಾಟ್ಯಶಾಸ್ತ್ರದ ಪ್ರಕಾರ ಭರತನು ತನ್ನ ನೂರು ಮಕ್ಕಳು ಹಾಗು 24 ಅಪ್ಸರೆಯರಿಗೆ ನಾಟ್ಯ ಕಲೆಯನ್ನು ಕಲಿಸಿ ಪ್ರಚಾರಪಡಿಸಿದನು. ಹೀಗೆ ಪ್ರಚಾರಕ್ಕೆ ಬಂದ ಈ ನಾಟ್ಯ ಕಲೆ ಕ್ರಮೇಣ ಆಯಾ ಪ್ರಾಂತ್ಯದ ಛಾಪನ್ನು ಮೈಗೂಡಿಸಿಕೊಂಡು ವಿವಿಧ ನಾಟ್ಯ ಪ್ರಕಾರಗಳಾಗಿ ಮೂಡಿ ಬಂದಿದೆ.

ನಾಟ್ಯದ ಉತ್ಪತ್ತಿ ಹಿನ್ನೆಲೆ :– ಭರತನಾಟ್ಯ ಪುರಾತನ ಗ್ರಂಥಗಳ ಮತ್ತು ಗುರು–ಸಂಪ್ರದಾಯದ ಮೂಲಕ ಬೆಳೆದು ಬಂದ ಶಾಸ್ತ್ರೀಯ ನೃತ್ಯಕಲೆ. ಈ ನೃತ್ಯಕ್ಕೆ ಸಮಾಜದಲ್ಲಿ ಮಹತ್ತರ ಸ್ಥಾನವಿದೆ. ನೃತ್ಯ ಕೇವಲ ಮನರಂಜನೆಯ ಸಾಧನವಲ್ಲ ಜೀವನದ ಹಲವು ಮುಖಗಳನ್ನು ಸುಂದರವಾಗಿ ನಿರೂಪಿಸುವ ಮೂಲಕ ಭಾವದ ಪ್ರಚೋಧನೆಯಾಗುತ್ತದೆ.

ಭರತ ನಾಟ್ಯವನ್ನು ಭರತ ಮುನಿಯು ಪ್ರಚಾರ ಪಡಿಸಿದನು ನಟರಾಜ, ಮಹಾಕಾಳಿ, ಪಾರ್ವತಿ, ಗಣಪತಿ, ಶ್ರೀ ಕೃಷ್ಣ ಗೋಪಿಯರೂ, ಅಪ್ಸರೆಯರೂ, ದೇವಾದಿ ದೇವತೆಗಳೂ ಮುಂತಾದವರು ನರ್ತಿಸಿದ ಧಾರ್ಮಿಕ ನಂಟಿದೆ. ನೃತ್ಯವು ಅನೇಕ ರಾಣಿಯರೂ, ರಾಜಕುವರಿಯರೂ, ನರಶ್ರೇಷ್ಠನಾದ ಅರ್ಜುನನೂ ನರ್ತಿಸಿದ್ದರೆಂದು ಇತಿಹಾಸವಿದೆ. ಹೀಗೆ ನೃತ್ಯಕ್ಕೆ ಉನ್ನತ ಸ್ಥಾನ ದೊರೆತಿದೆ.

ಭರತ ನಾಟ್ಯವು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರುತ್ತದೆ. ನೃತ್ತ – ಲಯಬದ್ದ ಚಲನೆ, ನಾಟ್ಯ – ನಾಟಕೀಯತೆ ಮತ್ತು ನೃತ್ಯ – ನೃತ್ತ ಮತ್ತು ನಾಟ್ಯದ ಸಂಯೋಜನೆ. ತಮಿಳುನಾಡಿನಲ್ಲಿ ವಿಶೇಷವಾಗಿ ತಂಜಾವೂರಿನಲ್ಲಿ ಇದು ಯಾವಾಗಲೂ ಕಲಿಕೆ ಮತ್ತು ಸಂಸ್ಕೃತಿಯ ಸ್ಥಾನಕ್ಕೆ ಕೇಂದ್ರವಾಗಿದೆ.



**ನೃತ್ಯದ ಪ್ರಯೋಜನಗಳು :**

1) ಕಣ್ಣುಗಳ ಕಾಂತಿಯುಕ್ತತೆ,

2) ಕೈ, ಕಾಲುಗಳಿಗೆ ಶಕ್ತಿ ವೃದ್ಧಿಸುವುದು.

3) ಜ್ಞಾಪಕ ಶಕ್ತಿ ವರ್ಧನೆ

4) ಕಷ್ಟ ಸಹಿಷ್ಣುತೆ.

5) ಹಸನ್ಮುಖ ಮೃದು ವರ್ತನೆ

6) ನಡಿಗೆಯಲ್ಲಿ ಲಾಲಿತ್ಯ.

7) ಏಕಾಗ್ರಚಿತ್ತತೆ ಹೆಚ್ಚುವುದು

ಇದನ್ನು ಕಲಿಯುವವರು ಹೇಗಿರಬೇಕು?

ಆಸಕ್ತಿ, ತಾಳ್ಮೆ, ಚಿತ್ತೇಕಾಗ್ರತೆ, ಅಭ್ಯಾಸ ಕಲೆಯ ಬಗ್ಗೆ ಮರ್ಯಾದೆ, ಗುರುವಿನ ಬಗ್ಗೆ ಗೌರವವಿದ್ದು ಕಲಿಕೆಯಲ್ಲಿ ಶ್ರದ್ಧೆ ಅವಶ್ಯಕ.



**ಹೇಮಾಶ್ರೀ ಯು.ಪಿ**
7ನೇ ತರಗತಿ

# ಬುದ್ಧಿವಂತಿಕೆಯಿಂದ ಯಶಸ್ಸು

ಒಂದು ಪುಟ್ಟ ಗ್ರಾಮ. ಆ ಪುಟ್ಟ ಗ್ರಾಮದಲ್ಲಿ ಬಡ ದಂಪತಿಗಳು ವಾಸಿಸುತ್ತಿದ್ದರು. ಅವರಿಗೆ ಒಬ್ಬಳು ಮುದ್ದಾದ ಮಗಳು.ಮನೆಯಲ್ಲಿ ಬಡತನವಿದ್ದರೂ ಸಂತೋಷದಿಂದ ಇದ್ದರು. ಮುದ್ದಾದ ಮಗಳ ಹೆಸರು ರಚಿತಾ. ರಚಿತಾಳ ತಂದೆ ರೈತ, ಆತ ಕಷ್ಟಪಟ್ಟು ಹೊಲಗದ್ದೆಯನ್ನು ಉಳುಮೆ ಮಾಡುತ್ತಿದ್ದನು. ಆತ ಆ ಊರಿನ ಸಾಹುಕಾರನ ಬಳಿ ಸಾಲವನ್ನು ಮಾಡಿದ್ದನು. ಬರಗಾಲದಿಂದಾಗಿ ಎರಡು–ಮೂರು ವರ್ಷಗಳಾದರೂ ಸಾಲವನ್ನು ತೀರಿಸಲಿಲ್ಲ. ಆಗ ಸಾಹುಕಾರ ಬಂದು ನೀನು ಸಾಲವನ್ನು ತೀರಿಸಬೇಕು,ಇಲ್ಲವೇ ನಿನ್ನ ಮಗಳನ್ನು ನನಗೆ ಮದುವೆಮಾಡಿ ಕೊಡಬೇಕು ಎಂದು ಶರತ್ತು ಹಾಕಿದನು.ತಂದೆ ತಾಯಿಗೆ ಮಗಳನ್ನು ಮದುವೆ ಮಾಡುವ ಆಸೆ ಇರಲಿಲ್ಲ, ಹಾಗೆಯೇ ಸಾಲವನ್ನು ತೀರಿಸುವ ಸಾಮರ್ಥ್ಯವೂ ಇರಲಿಲ್ಲ. ಸಮಯ ಕಳೆದ ನಂತರ ಸಾಹುಕಾರ ಮನೆಗೆ ಬಂದಾಗ ರಚಿತಾ ತಂದೆ ತಾಯಿಯ ಕಷ್ಟ ನೋಡಲಾಗದೆ ನನಗೆ ಹದಿನೆಂಟು ವರ್ಷಗಳಾದ ಮೇಲೆ ನಿಮ್ಮನ್ನು ಮದುವೆ ಆಗುವುದಾಗಿ ಹೇಳಿದಳು. ಮಗಳ ಮಾತನ್ನು ಕೇಳಿ ತಂದೆ ತಾಯಿಗೆ ಆಶ್ಚರ್ಯವಾಯಿತು.

ರಚಿತಾಳಿಗೆ ಹದಿನೆಂಟು ವರ್ಷಗಳಾದ ಬಳಿಕ ಸಾಹುಕಾರ ಮನೆಗೆ ಬಂದನು. ಆಗ ರಚಿತ "ಇನ್ನು ನಾಲ್ಕು ವರ್ಷಗಳ ಕಾಲ ಓದಿದರೆ ನನ್ನ ಓದು ಮುಗಿಯುತ್ತದೆ. ನಂತರ ಮದುವೆ ಆಗುವುದಾಗಿ ಸಾಹುಕಾರನಿಗೆ ಹೇಳಿದಳು.ರಚಿತ ದೃಢ ನಿರ್ಧಾರವನ್ನು ಮಾಡಿ ಹಗಲಿರುಳು ಓದಲು ಆರಂಭಿಸಿದಳು. ನಂತರ ನಾಲ್ಕು ವರ್ಷಗಳ ಬಳಿಕ ಒಬ್ಬ ಜಿಲ್ಲಾಧಿಕಾರಿಯಾಗಿ ಸರ್ಕಾರಿ ಕಾರಿನಿಂದ ಇಳಿದು ಬಂದಳು. ನಂತರ ಸಾಹುಕಾರನ ಬಳಿ ಹೋಗಿ ನಾನು ನಿನ್ನನ್ನು ಮದುವೆ ಆಗುವುದಿಲ್ಲ ಎಂದು ಹೇಳಿ ಬಡ್ಡಿ ಸಮೇತ ತನ್ನ ತಂದೆ ಮಾಡಿದ ಸಾಲವನ್ನು ಸಾಹುಕಾರನಿಗೆ ತೀರಿಸಿದಳು.ಬಡ ತಂದೆ ತಾಯಿ ಸಂತೋಷದಿಂದ ತಮ್ಮ ಮಗಳನ್ನು ತಬ್ಬಿಕೊಂಡು ಸಂತೋಷದ ಕಣ್ಣೀರಿನ ಧಾರೆಯನ್ನೆ ಹರಿಸಿಬಿಟ್ಟರು.ರಚಿತಾ ಬುದ್ಧಿವಂತಿಕೆಯಿಂದ ಸುಲಭವಾಗಿ ಕಷ್ಟವನ್ನು ಎದುರಿಸಿದಳು.

ನೀತಿ: ಬುದ್ಧಿವಂತಿಕೆಯೇ ಒಂದು ದೊಡ್ಡ ಅಸ್ತ್ರ.



**ವೀಣಾ ಎಂ.**
10ನೇ ತರಗತಿ



## ಗೆಳತಿಯರ ಕಪಿಚೇಷ್ಠೆ

ಗೆಳತಿಯರಿಲ್ಲದ ಜಗವೇ ಇಲ್ಲ,
ಅವರಿಲ್ಲದೆ ನಮಗೆ ಖುಷಿಯೂ ಇಲ್ಲ.
ಅವರನ್ನು ನೋಡದೆ ನಮ್ಮ ದಿನವೇ ಮುಗಿಯುವುದಿಲ್ಲ,
ಅವರು ನಕ್ಕರೆ ಸಾಕು ಅದಕ್ಕಿಂತ ದೊಡ್ಡ ಐಶ್ವರ್ಯವೇ ಬೇಕಿಲ್ಲ.
ಜಗಳ ಮಾಡದ ಗೆಳತನವೇ ಇಲ್ಲ,
ಯಾರೇ ಬಂದರೂ ನಮ್ಮನ್ನು ದೂರ ಮಾಡಲು ಸಾಧ್ಯವಿಲ್ಲ.
ಜಗಳ ಆಡಿ ಒಂಟಿ ಆಗಿ ಇರೋಕೆ ಸಾಧ್ಯವಿಲ್ಲ.
ಇವರು ಕೊಡುವ ಕಾಟವನ್ನು ನಮ್ಮನ್ನು ಬಿಟ್ಟು ಬೇರೆಯವರಿಂದ ಸಹಿಸಲು ಸಾಧ್ಯವಿಲ್ಲ,
ಒಂದು ನಿಮಿಷವೂ ನಾವು ಸುಮ್ಮನಿರುವುದಿಲ್ಲ.
ಎಷ್ಟೇ ದೂರವಾದರೂ ಮನಸ್ಸಿನೊಳಗಿರುವ ಪ್ರೀತಿ ಕುಗ್ಗುವುದಿಲ್ಲ,
ಯಾರೆ ಬಂದರು ಮುರಿಯಲಾಗದ ನಮ್ಮ ಗೆಳತಿಯರ ಸಂಬಂಧ.
ನಮ್ಮ 10ನೇ ತರಗತಿ ಗೆಳತಿಯರ ಕಪಿಚೇಷ್ಠೆಯೂ ಬಲು ಚಂದ..



**ಸೃಜನ ವಿ.**
10ನೇ ತರಗತಿ

## ಸ್ವಾಮಿ ವಿವೇಕನಂದ




ಹಾರುವ ಹಕ್ಕಿ ನೀರಲ್ಲಿ ಈಜಬಹುದು
ಆದರೆ, ನೀರಲ್ಲಿ ಈಜುವ ಮೀನು ಹಾರಲು ಸಾಧ್ಯವಿಲ್ಲ.
ಬೇರೆ ಜನಗಳ ಮಾತನ್ನು ದೂರಮಾಡಿಕೊಳ್ಳಬಹುದು
ಆದರೆ, ನಮ್ಮ ವಿವೇಕಾನಂದರ ನುಡಿಗಳನ್ನು ದೂರ ಮಾಡಲು ಸಾಧ್ಯವಿಲ್ಲ.

ಸವಿಯಾಗಿ ಬರೆಯಲು ಕವಿಯು ನಾನಲ್ಲ
ಚಿರವಾಗಿ ಉಳಿಯಲು ಈ ಭೂಮಿ ನನ್ನದಲ್ಲ.
ಆದರೆ, ಜೀವನದ ಅರ್ಥವನ್ನು ನುಡಿಮುತ್ತುಗಳಲ್ಲಿ ವರ್ಣಿಸಲು
ನಾವು ಸ್ವಾಮಿ ವಿವೇಕಾನಂದರಲ್ಲ.



**ಸಹನಾ ಎಲ್.ಬಿ.**
5ನೇ ತರಗತಿ

## ನನ್ನ ತಂದೆ



ಮೋಡಗಳ ಒಡೆಯ ಇಂದ್ರನಂತೆ,
ನನ್ನ ಜೀವನದ ಬಹುಮುಖ್ಯ ವ್ಯಕ್ತಿಯಂತೆ !
ನನ್ನನ್ನು ಸಲಹಿದೆ ನೀ ರಾಣಿಯಂತೆ,
ಶ್ರೀ ರಾಮನನ್ನೇ ನಿನ್ನ ನಾಮದಲ್ಲಿಟ್ಟಿರುವೆಯಂತೆ,
ಅದುವೇ ನನ್ನ ತಂದೆ ರಮೇಶನಂತೆ !

## ಅಮ್ಮ

ನೀನು ಬೆಳೆಸಿದೆ ನನ್ನನ್ನು ನಿನ್ನ ಗರ್ಭದಲ್ಲಿ,
ಆದ್ದರಿಂದಲೇ ನಾನು ಇರುವೆ ಈ ಪುಣ್ಯ ಭೂಮಿಯಲ್ಲಿ.
ಕಂಡೆ ನಾನು ಮಗುವಿನ ಹೃದಯ ನಿನ್ನಲ್ಲಿ,
ಆದ್ದರಿಂದ ಎಂದಿಗೂ ನೀನು ನನ್ನ ಮನದಲ್ಲಿ.
ಹಲವಾರು ಕೀಟಲೆಗಳನ್ನು ನಾನು ಮಾಡಿದೆ ನಿನ್ನೆದುರಲ್ಲಿ,
ಆದರೂ ಕ್ಷಮಿಸಿದೆ ನೀನು ನನ್ನನ್ನು ಶಾಂತ ಮನೋಭಾವದಲ್ಲಿ.

ಶಾಂತ ಎಂಬ ನಾಮ ನಿನ್ನಲ್ಲಿ,
ಅಮ್ಮ ನೀನೆಂದು ನನ್ನ ಉಸಿರಲ್ಲಿ.



**ಮೇಘನಾ ಬಿ.ಆರ್.**
10ನೇ ತರಗತಿ

## ಕವನಗಳ ಹಾಡು

ಕನ್ನಡಿ ನೂರಿರಲಿ ಪ್ರತಿಬಿಂಬ ಒಂದೇ
ಜಾತಿ ನೂರಿರಲಿ ದೇಶ ಒಂದೇ!
ಸಾವಿರ ನದಿಯಿರಲಿ ಕಡಲು ಒಂದೇ
ದ್ವೇಷ ನೂರಿರಲಿ ಸ್ನೇಹ ಒಂದೇ!
ನಕ್ಷತ್ರ ನೂರಿರಲಿ ಆಕಾಶ ಒಂದೇ
ಕನಸು ನೂರಿರಲಿ ಮನಸು ಒಂದೇ!
ಹೂವು ನೂರಿರಲಿ ಮಕರಂದ ಒಂದೇ
ನೆನಪು ನೂರಿರಲಿ ಮೌನ ಒಂದೇ!
ದಿನವು ಹುಟ್ಟುವ ಸೂರ್ಯ
ಎಲ್ಲರಿಗೂ ಬೆಳಕನ್ನು ನೀಡುವುದು ಅವನ ಕಾರ್ಯ.
ಮುಂಜಾನೆ ಎದ್ದು ರವಿಯನ್ನು ನೋಡಿದಾಗ
ಬಣ್ಣಿಸಲಾಗದು ಅವನ  ಸೌಂದರ್ಯ



**ನಿಸರ್ಗ ಎಸ್.**
6ನೇ ತರಗತಿ

## ಜೀವನದ ಆಟ–ಪಾಠ

ಬಣ್ಣಗಳ ಜೊತೆ ಆಟ, ಮಕ್ಕಳ ಜೊತೆ ಪಾಠ
ಚಿತ್ರಗಳ ಜೊತೆ ನೋಟ, ಹೊಟ್ಟೆ ತುಂಬಾ ಊಟ
ನೀನಿಲ್ಲದೆ ಸಾಗುವ ಓಟ, ಈ ಜೀವನವೇ ಜಂಜಾಟ
ತಂದೆಯಿಂದ ಪಡೆದ ಗತ್ತು, ತಾಯಿ ಕೊಡುವ ಕೈ ತುತ್ತು
ಶಿಕ್ಷಕರಿಂದ ಕಲಿತ ಶಿಸ್ತು,
ಸ್ವಂತ ದುಡಿದು ತಿನ್ನುವುದು ಜೀವನದ ನೀಯತ್ತು!.





**ದೀಪ್ತಿ**
4ನೇ ತರಗತಿ

## ಅಪ್ಪ ಎಂಬ ಆಕಾಶ

ಕರಗದಷ್ಟು ಪ್ರೀತಿ ಕೊಟ್ಟ ಸಾಹುಕಾರ ಅಪ್ಪ
ನನ್ನ ತಪ್ಪುಗಳ ಸಲಹೆಗಾರರು ನನ್ನಪ್ಪ
ಪರಿಪೂರ್ಣತೆಯ ಪ್ರತಿಬಿಂಬ ಅಪ್ಪ
ನೋವಿಗೆ ನಲಿವನ್ನ ಹೇಳಿಕೊಡುವ ಸ್ನೇಹಿತ ಅಪ್ಪ
ಸರಳತೆಯ ಮಾಣಿಕ್ಯ ನನ್ನ ಅಪ್ಪ
ಅಗಾದ ಪ್ರೀತಿಯ ಕಡಲು ಅಪ್ಪ
ಕನಸುಗಳಿಗೆ ನನಸಿನ ರೆಕ್ಕೆ ಅಪ್ಪ
ಆತ್ಮವಿಶ್ವಾಸದ ದಾರಿ ಅಪ್ಪ
ನೊಂದ ಮನಕ್ಕೆ ನವ ಚೈತನ್ಯ ಅಪ್ಪ
ನಂಬಿಕೆ ಭರವಸೆಯೆ ಅಪ್ಪ
ನನ್ನ ನೋವಿನ ನಗುವೇ ನನ್ನಪ್ಪ
ನನ್ನ ಕನಸುಗಳ ಆದರ್ಶ ಅಪ್ಪ
ಅದ್ಭುತವನ್ನ ಮೀರಿಸುವ ದೈವ ಸೃಷ್ಟಿ ಅಪ್ಪ
ಎಲ್ಲ ಕಷ್ಟ ಸುಖಗಳ ಪಾಲುದಾರ ನನ್ನಪ್ಪ
ತನ್ನವರಿಗಾಗಿ ಬದುಕುವ ಏಕೈಕ ಜೀವಿ ಅಪ್ಪ
ಜಗದಲ್ಲಿ ಎಂದೂ ಬದಲಾಗದ ವ್ಯಕ್ತಿತ್ವ ಅಪ್ಪ. ಜಗದ
ಪ್ರತಿಯೊಂದು ಜೀವಿಗೆ ಅಪ್ಪನೆಂಬ
ಜೀವಿಯೇ ಆದರ್ಶ.
ಪ್ರತಿಯೊಬ್ಬರ ಬಾಳಿನ ಬೆಳಕೇ ಅಪ್ಪ
ಎಂಬ ಆಕಾಶ



**ಸಹನಾ ಎಲ್.ಬಿ.**
6ನೇ ತರಗತಿ

## ಭಾರತೀಯ

ಶ್ರೀಮಂತ ರಾಷ್ಟ್ರವಾಗದಿದ್ದರು
ಶ್ರೀಮಂತನಾಗಿ ಬಾಳಬಹುದು
ಈ ನಮ್ಮ ನಾಡಿನಲ್ಲಿ
ಪ್ರತಿ ಮಣ್ಣಿನ ಕಣದಲ್ಲೂ ನೋಡಬಹುದು ಸಂಸ್ಕೃತಿ
ಪುರಾತನವಾದದು ನಮ್ಮ ಈ ಸಂಸ್ಕೃತಿ
ವಿನೂತನ ಭಾರತಕ್ಕೆ ಹಾಡುತ್ತಿರುವುದು ನಾಂದಿ
ವಿವಿಧತೆಯಲ್ಲಿ ಏಕತೆ ಕಾಣುತ್ತಾ
ಹಂಚಬೇಕು ಪ್ರೀತಿ
ಇದೇ ಭಾರತೀಯರು ಜಗತ್ತಿಗೆ
ಸಾರಿದ ನೀತಿ.



**ರಂಜಿತಾ ಟಿ.ಎಸ್.**
5ನೇ ತರಗತಿ

## ಗಣೇಶ ಹಬ್ಬ

ಗಣೇಶ ಹಬ್ಬ ಬಂದರೆ ಹಾಕುವರು
ಕರೆಂಟಿನ ಸರಮಾಲೆ
ಗಣೇಶನಿಗೆ ಹಾಕುವರು ಹೂಮಾಲೆ
ಗಣೇಶನ ಕೂರಿಸಲಿಕ್ಕೆ ಹಾಕುವರು ಪೆಂಡಲ್
ಹೊಡೆವರು ಡೋಲ್ ಕುಣಿವರು ಹುಡುಗರು
ನೋಡುವವರು ನಾವು
ಪಂದ್ಯದಲ್ಲಿ ಗೆದ್ದುಕೊಂಡು
ತಂದೆ-ತಾಯಿ ಸುತ್ತಿಕೊಂಡು
ಹೊಟ್ಟೆಗೆ ಹಾವ ಕಟ್ಟಿಕೊಂಡು
ಇಲಿಯ ಮೇಲೆ ಏರಿಕೊಂಡು
ಎಲ್ಲರ ಮನವ ಕದ್ದುಕೊಂಡು
ಪ್ರಥಮ ಪೂಜೆ ಮಾಡಿಸಿಕೊಂಡು
ಇರುವೆ ನೀನು ವಿನಾಯಕ
ನಮಗೆ ಹರಸುವೆಯ ಕಡೆತನಕ.



**ಪೂರ್ವಿಕ ಎ.ವಿ.**
5ನೇ ತರಗತಿ

## ಅಮ್ಮ

ನನ್ನ ಕವನದ ಶೀರ್ಷಿಕೆ ಅಮ್ಮ
ಅಮ್ಮ ಅಮ್ಮ ಅಮ್ಮ
ನನ್ನಯ ಒಲುಮೆಯ ಪ್ರೀತಿಯ ಅಮ್ಮ
ಚಂದ್ರನ ತೋರುತ ಅನ್ನವ ತಿನಿಸುತ
ಅಕ್ಕರೆ ತೋರಿ ಬೆಳೆಸುವಳು ಅಮ್ಮ
ನನ್ನಯ ಕಲಿಕೆಯ ಪ್ರಥಮ ಗುರುವಾಗಿ
ನನ್ನಯ ಗುರುವಿನ ಭಯವನು ತೋರುತ
ಅಕ್ಷರ ಅಂಕಿಯ ಕಲಿಸುವಳು ಅಮ್ಮ
ಅಮ್ಮ ಅಮ್ಮ ಅಮ್ಮ
ಮುದ್ದಾದ ಕೆನ್ನೆಯ ಸವರುವಳು ಅಮ್ಮ
ಗುಮ್ಮನ ಭಯವನು ತೋರುತ ನನಗೆ
ನಿದ್ರೆಯ ಕನಸನು ಬರಿಸುವಳು ಅಮ್ಮ
ಅಮ್ಮ ಅಮ್ಮ ಅಮ್ಮ.



**ಅಶ್ವಿನಿ ಟಿ.ಎಸ್.**
1ನೇ ತರಗತಿ

## ಜೋಕ್ಸ್‌ಗಳು

### ಡ್ರೈವರ್ ಜೊತೆ ಪ್ರವಾಸಿ

ಪ್ರವಾಸಿ :- "ಕಾಫಿ ಕುಡಿದು ಬರೋವರಿಗೂ ಬಸ್ ಇರುತ್ತೇನಪ್ಪಾ ?

ಕಂಡಕ್ಟರ್ - " ಇರುತ್ತೆ ಸಾರ್"

ಪ್ರವಾಸಿ - ಏನು ಗ್ಯಾರಂಟಿ?

ಕಂಡಕ್ಟರ್ - ಡ್ರೈವರನ್ನು ಜೊತೇಲಿ ಕರಕೊಂಡು ಹೋಗಿ ಸಾರ್

### ಎರಡು ಮುಳ್ಳು ಗಡಿಯಾರದಲ್ಲಿದೆ

ತಂದೆ - ಲೇ ಮಗು! ಈಗ ಗಂಟೆ ಎಷ್ಟಾಗಿದೆಯೋ?

ಮಗ - ನಂಗೆ ಗೊತ್ತಿಲ್ಲಪ್ಪಾ

ಅಪ್ಪ - ಮನೆಗೆ ಹೋಗಿ ಚಿಕ್ಕ ಮುಳ್ಳು ದೊಡ್ಡ ಮುಳ್ಳು ಎಲ್ಲಿದೆ ಅಂತ ನೋಡ್ಕೊಂಡು ಬಾರೋ.

ಮಗ - (ಒಳಗೆ ಹೋಗಿ ಬಂದ ನಂತರ) ಎರಡೂ ಮುಳ್ಳು ಗಡಿಯಾರದಲ್ಲೇ ಇದೆ ಅಪ್ಪಾ.



**ಯಶಸ್ವಿ**
4ನೇ ತರಗತಿ

## ಅಸಮಾನ್ಯ ವ್ಯಕ್ತಿತ್ವ

ದೇಶದಲ್ಲಿ ರಾಜ, ಸಮಾಜದಲ್ಲಿ ಗುರು
ಪರಿವಾರದಲ್ಲಿ ತಂದೆ, ಮನೆಯಲ್ಲಿ ಸ್ತ್ರೀ
ಇವರು ಎಂದಿಗೂ ಸಾಧಾರಣ ವ್ಯಕ್ತಿಗಳಲ್ಲ. ಏಕೆಂದರೆ
ಅಭಿವೃದ್ಧಿ ಮತ್ತು ವಿನಾಶ ಇವರ ಕೈಯಲ್ಲೇ ಇರುತ್ತದೆ



**ಹರ್ಷಿತ**
4ನೇ ತರಗತಿ

**Education is the best weapon to empower the students through Quality, High Caliber, National Integrity with human attitude and social concern**

Moulding the future generation for a better tomorrow since 1996 onwards from LKG to PG under one roof

## OUR EDUCATIONAL INSTITUTIONS



### AT SHIKARIPURA

Kumadvathi College of Education
Kumadvathi High School
Kumadvathi Science & Commerce PU College
Kumadvathi Residential Central School
Kumadvathi First Grade College
Kumadvathi Post Graduate Centre
Kumadvathi Apperal Training & Designing Centre
Mythri Lower & Higher Primary School

### AT SHIVAMOGGA

Mythri School of Nursing
Mythri College of Nursing
Mythri College of Education

### OUR SISTER Concern

**Prerana Education Society Trust**, Shivamogga
PES Institute of Technology & Management
PES Institute of Advanced Management Studies
PES Pre-University College
PES Public School
PES Polytechnic
PES Kids Academy

# ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

**ಶಿಕಾರಿಪುರ, ಶಿವಮೊಗ್ಗ ಜಿಲ್ಲೆ**



ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ



ಕುಮದ್ವತಿ ವಸತಿಯುಕ್ತ ಶಾಲೆ (ಸಿ.ಬಿ.ಎಸ್.ಇ.)



ಮೈತ್ರಿ ಪ್ರಾಥಮಿಕ ಶಾಲೆ ಹಾಗೂ ಕುಮದ್ವತಿ ಪ್ರೌಢಶಾಲೆ



ಕುಮದ್ವತಿ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಕಾಲೇಜು



ಕುಮದ್ವತಿ ಪ್ರಥಮ ದರ್ಜೆ ಕಾಲೇಜು ಮತ್ತು
ಸ್ನಾತಕೋತ್ತರ ಕೇಂದ್ರ



ಕುಮದ್ವತಿ ವಸತಿ ನಿಲಯ

ಮುದ್ರಣ : ರಾಯಲ್, ಶಿವಮೊಗ್ಗ, ✆ 98862 73495